ಹೊರನಾಡ ಚಿಲುಮೆ

ಕಾಂಗರುನಾಡಿನ ಕನ್ನಡಿಗರಿಂದ ವಿಶ್ವ ಕನ್ನಡಿಗರ ಹೃದಯಕ್ಕೆ

ಆಸ್ಟ್ರೇಲಿಯಾದ ಮೊಟ್ಟಮೊದಲ ಕನ್ನಡ ಇ-ಮಾಸಪತ್ರಿಕೆ | Chilume Circulated in and around 10 countries | ಸಂಚಿಕೆ ೯, ಫೆಬ್ರವರಿ 2014



ಕ್ಲಿಕ್: ಶ್ರೀನಾಥ್ ವಿ, ಬೆಂಗಳೂರು

Find us on: facebook

ಹೊರನಾಡ ಚಿಲುಮೆ ಇ-ಮಾಸ ಪತ್ರಿಕೆಯ ಓದುಗರಿಗೆಂದು ತೆರೆಯಲಾಗಿರುವ ಫೇಸ್ಬುಕ್ ಗುಂಪು ಸೇರಿಕೊಳ್ಳಲು ಕೆಳಗಿನ ಲಿಂಕ್ ಕ್ಲಿಕ್ ಮಾಡಿ

JOIN CHILUME FACEBOOK GROUP (You have to be logged in to facebook to join)

ಚಿಲುಮೆಯ ಒಳಗೆ

ಪುರಂದರದಾಸರ ಆರಾಧನೆ-ವರದಿ ... ಪು. ೧
ಸಂಪಾದಕೀಯ ... ಪು. ೨
ನಾ. ಕಸ್ತೂರಿ ಬಗ್ಗೆ ಲೇಖನ ... ಪು. ೩

ಚಿಲುಮೆಯ ಒಳಗೆ

ರಾಂ ರಾಮ! ಹಾಸ್ಯ ... ಪು. ೬
ಶರಪೋವ ಸ್ಪೆಷಲ್ ಮಿಠಾಯಿ ... ಪು. ೯
ಕಥಾ ಚಿಲುಮೆ ... ಪು. ೧೧

ಚಿಲುಮೆಯ ಒಳಗೆ

ರೆಸಿಪಿ ಕೊಡ್ತೀರಾ! ... ಪು. ೧೧
ಕಾವ್ಯ ಚಿಲುಮೆ ... ಪು. ೧೨
ಹಾಸ್ಯ ಚಿಲುಮೆ ... ಪು. ೧೨

ಚಿಲುಮೆಯ ಒಳಗೆ

ಸಹನೆ (ಕಥೆ) ... ಪು. ೧೩
ಪದ ಪುಂಜ ... ಪು. ೧೪
ರಂಗೋಲಿ ... ಪು. ೧೪

ಚಿಲುಮೆಯ ಒಳಗೆ

ಸೈಕಲ್ ಪಯಣ ... ಪು. ೧೫
ಛಾಯಾ ಚಿಲುಮೆ ... ಪು. ೧೮
ವಿಜ್ಞಾನ, ಅಲ್ಲಲ್ಲಿ ಏನೇನು ... ಪು. ೧೬

ಚಿಲುಮೆಯ ಒಳಗೆ

ಜನವರಿ ಪದಪುಂಜದ ಉತ್ತರ ಮತ್ತು ಸರಿಯಾಗಿ ಉತ್ತರಿಸಿದವರ ಹೆಸರು ಪ್ರಕಟ - ಪುಟ ೧೪ ರಲ್ಲಿ ...

ಈಗಿನ ಸುದ್ದಿ

ಪುರಂದರದಾಸರ ಆರಾಧನೆ – ಸಿಡ್ನಿ – ೨೦೧೪

ಶ್ರೀನಿವಾಸ ನಾಯಕರು ೧೫ನೇ ಶತಮಾನದಲ್ಲಿ 475000 ಕ್ಕೂ ಹೆಚ್ಚು ಕನ್ನಡ ಹಾಡುಗಳನ್ನು ರಚಿಸಿದ್ದಾರೆ. ಹೆಸರು ಚಿರಪರಿಚಿತವಾಗಿಲ್ಲವೇ? ಕರ್ನಾಟಕ ಶಾಸ್ತ್ರೀಯ ಸಂಗೀತ ಎಂದರೆ ನೆನಪಿಗೆ ಬರುವುದು ಲಂಬೋದರ ಲಕುಮಿಕರ. ಈ ಹಾಡಿನ ರಚನಕಾರರು ಪುರಂದರದಾಸರು. ಮುಂಚಿನ ಹೆಸರು ಸೀನಪ್ಪ ನಾಯಕ. ಅವರ ಭಕ್ತಿ ಪೂರ್ವಕ ಹಾಡುಗಳು ಭಗವಂತನ ಸಾಮಿಪ್ಯಕ್ಕೆ ಕರೆದೊಯ್ಯುತ್ತದೆ. ಪುರಂದರದಾಸರನ್ನು ನೆನೆಪಿಸಿಕೊಳ್ಳುವ ಮತ್ತು ಹಾಡುಗಳನ್ನು ಕೇಳುವ ಭಾಗ್ಯ ಸಿಡ್ನಿವಾಸಿಗಳಿಗೆ ದೊರೆಯಿತು. ಪುರಂದರ ಸಮಿತಿಯವರು ಆಯೋಜಿಸಿದ್ದ ಪುರಂದರ ದಾಸರ ಆರಾಧನೆ ಸಿಡ್ನಿಯಲ್ಲಿ ಸತತ ಹದಿನಾಲ್ಕನೇ ವರ್ಷದ ಸಂಭ್ರಮದ ಆಚರಣೆಯಾಗಿದ್ದು ಏರ್ಮಿಂಗ್ಟನ್ ಕಮ್ಯುನಿಟಿ ಆವರಣದಲ್ಲಿ ಎರಡನೇ ಫೆಬ್ರವರಿ ಭಾನುವಾರದಂದು ಯಶಸ್ವಿಯಾಗಿ ಜರುಗಿತು. ಸಿಡ್ನಿಯ ವಿಶ್ವ ಹಿಂದೂ ಪರಿಷತ್ ಸಂಸ್ಥೆ ಕೂಡ ಈ ಕಾರ್ಯಕ್ರಮದ ಯೋಜನೆಯಲ್ಲಿ ಭಾಗಿಯಾಗಿತ್ತು.

ವೇದಿಕೆಯಲ್ಲಿ, ಕೃಷ್ಣನ ವಿಗ್ರಹ ಮತ್ತು ಪುರಂದರ ದಾಸರ ಭಾವ ಚಿತ್ರ, ನಂದಾ ದೀಪಗಳು, ಹೂವುಗಳೊಂದಿಗೆ ಕಂಗೊಳಿಸುತ್ತಿತ್ತು. ಮೊದಲಿಗೆ ಒಂದು ಗುಂಪು ಪಿಳ್ಳಾರಿ ಗೀತೆಗಳು ಮತ್ತು ನವರತ್ನ ಮಾಲಿಕೆಯನ್ನು ಹಾಡಿದರು. ಇದೇ ಸಮಿತಿಯವರು ಜನವರಿ 19ರಂದು ಮಕ್ಕಳಿಗೆ ಮತ್ತು ಯುವಕ ಯುವತಿಯರಿಗೆ ದೇವರನಾಮದ ಹಾಡುಗಾರಿಕೆ ಸ್ಪರ್ಧೆ ಏರ್ಪಡಿಸಿತ್ತು. ಅದರ ವಿಜೇತರಿಗೆ ಬಹುಮಾನಗಳನ್ನು ವಿತರಿಸಿದರು. ಕರ್ನಾಟಕ ಸಂಗೀತ ಕಲಿಯುತ್ತಿರುವ ಹಲವಾರು ಚಿಕ್ಕ ಮಕ್ಕಳು ಮತ್ತು ಯುವಕ ಯುವತಿಯರು ಸೊಗಸಾಗಿ ದಾಸರಪದಗಳನ್ನು ಸುಶ್ರಾವ್ಯವಾಗಿ ಹಾಡಿದರು.

ಕಾರ್ಯಕ್ರಮದಲ್ಲಿ ಹಾಡುಗಳನ್ನು ನವವಿಧ ಭಕ್ತಿಯಾಗಿ ವಿಂಗಡಿಸಿದ್ದರು. ಅವುಗಳು ಶ್ರವಣಂ, ಕೀರ್ತನಂ, ಸ್ಮರಣಂ, ಪಾದಸೇವನಂ, ಅರ್ಚನಂ, ವಂದನಂ, ದಾಸ್ಯಂ, ಸಖ್ಯಂ, ಆತ್ಮನಿವೇದನಂ. ಒಂದೊಂದು ಗುಂಪು ಒಂದೊಂದು ಭಕ್ತಿವಿಧಾನವನ್ನು ಆಯ್ಕೆ ಮಾಡಿಕೊಂಡು ಹಾಡಿದರು. ಲಕ್ಷ್ಮಿ ಅಭಿಷೇಕ್ ಎಂಬುವವರು ಒಂದೊಂದು ಭಕ್ತಿ ವಿಧಾನವನ್ನೂ ವಿವರಿಸಿದರು. ಮೀರಾಬಾಯ್ ರ ಕೃಷ್ಣನ ಭಕ್ತಿ "ದಾಸ್ಯಂ" ಗೆ ಒಳ್ಳೆಯ ಉದಾಹರಣೆ. "ಸಖ್ಯಂ" ಗೆ ಒಳ್ಳೆಯ ಉದಾಹರಣೆ ಅರ್ಜುನ. "ಆತ್ಮನಿವೇದನಂ" ನಲ್ಲಿ ಬರುವ ಭಕ್ತಿ ನಮ್ಮನ್ನು ಸಂಪೂರ್ಣವಾಗಿ ಭಗವಂತನಿಗೆ ಸಮರ್ಪಣೆ ಮಾಡಿಕೊಳ್ಳುವುದು. ದ್ರೌಪದಿಯ ಭಕ್ತಿ ಆತ್ಮನಿವೇದನಂ.

ಮಕ್ಕಳ ಹಾಡುಗಾರಿಕೆ ಮುಗಿದ ಮೇಲೆ ದೊಡ್ಡವರ ಗುಂಪು ಹಾಡಿಗೆ ಸಿದ್ದವಾಗುತ್ತಿರಬೇಕಾದರೆ, ಅಲ್ಲಿ ನೆರೆದಿರುವವರಿಗೆಲ್ಲಾ ತಣ್ಣನೆಯ ಮಜ್ಜಿಗೆ ಸರಬರಾಜಾಯಿತು. ಚಿಕ್ಕಮಕ್ಕಳಿಗೆ ಬಿಸ್ಕತ್ ಇತ್ಯಾದಿ ತಿಂಡಿ ತಿನಿಸುಗಳೂ ಸಿಕ್ಕಿತು.

(ಮುಂದಿನ ಪುಟ ನೋಡಿ) ...

ಕೇ ಳೋ ಣ

ಕೆ.ಎಸ್. ನ ರವರ ಸಿರಿಗೆರೆಯ ನೀರಿನಲಿ ...

ಪ್ರೇಮಗೀತೆ ಕೇಳಲು ಚಿತ್ರ ಕ್ಲಿಕ್ ಮಾಡಿ (Click picture to view)

ಹೊಸ ನಮೂನೆಯ ಪದಪುಂಜ ಪುಟ ೧೪ ರಲ್ಲಿ

ತನುವ ನೀರೊಳಗದ್ದಿ ಫಲವೇನು ...

ದಾಸರ ರಚನೆ ಕೇಳಲು ಚಿತ್ರ ಕ್ಲಿಕ್ ಮಾಡಿ (Click picture to view)

ನೋ ಡೋ ಣ

ನಿಮ್ಮ ಕಥೆ, ಕವನ, ಸಲಹೆ ಇತ್ಯಾದಿ ನಮಗೆ ಕಳುಹಿಸಿ. ನಮ್ಮ ಇ-ಮೇಲ್ – HORANADACHILUME@GMAIL.COM

ಪುರಂದರದಾಸರ ಆರಾಧನೆ - ಸಿಡ್ನಿ - ೨೦೧೪

(ಹಿಂದಿನ ಪುಟದಿಂದ) ... "ಶ್ರವಣಂ ಭಕ್ತಿ ವಿಧಾನ" ಆರಿಸಿ ಶ್ರೀಮತಿ ನಿರ್ಮಲ ರಾವ್ ತಂಡದವರು "ನಾ ಡೊಂಕಾದರೇನು ನಿನ್ನ ನಾಮ ಡೊಂಕೆ ವಿಠಲ" ಹಾಡಿದರು. "ಕೀರ್ತನಂ" ವಿಧದಲ್ಲಿ ಶ್ರೀಮತಿ ಚಿತ್ರಾ ಕೃಷ್ಣಮೂರ್ತಿ "ರಾಮ ಮಂತ್ರವ ಜಪಿಸೋ", ಪ್ರಸಿದ್ಧ ಗಾಯಕಿ ಮತ್ತು ಗುರುಗಳಾದ ಉಮಾ ಅಯ್ಯರ್ ಮತ್ತು ಅವರ ಶಿಷ್ಯರು "ಸ್ಮರಣಂ" ಭಕ್ತಿ ವಿಧಾನದಲ್ಲಿ "ನಾರಾಯಣ ನಿನ್ನ ನಾಮದ ಸ್ಮರಣೆ", ಶ್ರೀ ದಿವಾಕರ್ ತಂಡ "ಪಾದ ಸೇವನಂ" ಭಕ್ತಿ ಮಾರ್ಗದಲ್ಲಿ "ನಂಬಿದೆ ನಿನ್ನ ಪಾದವ" ವೀಣಾ ವಾದನದ ಜೊತೆಗೆ ಹಾಡಿದರು. "ಅರ್ಚನಂ" ವಿಧದಲ್ಲಿ ಮೇಧಾ ಪಾಟಕ್ ತಂಡ ಹಿಂದೂಸ್ತಾನಿ ಶೈಲಿಯಲ್ಲಿ "ಹೇಗೆ ಮೆಚ್ಚಿಸಲಿ" ಹಾಡಿದರು. "ವಂದನಂ" ಭಕ್ತಿಯಲ್ಲಿ ಕಲ್ಪನಾ ರಾಮು ತಂಡ "ಕಂಡು ಕಂಡು ನೀ ಎನ್ನ" ಹಾಡಿದರು. "ದಾಸ್ಯಂ" ಭಕ್ತಿ ಮಾರ್ಗದಲ್ಲಿ ಶ್ರೀ ಮೈಸೂರ್ ನಾಗರಾಜ್ ತಂಡ ಮೋಹನ ರಾಗದಲ್ಲಿ "ಬಿಡೆ ನಿನ್ನ ಪಾದವ ಬಿಂಕವಿನ್ನೇಕೋ" ಮ್ಯಾಂಡೊಲಿನ್ ಸಹಿತ ಹಾಡಿದರು. "ಸಖ್ಯಂ" ಭಕ್ತಿ ವಿಧಾನದಲ್ಲಿ ಶ್ರೀಮತಿ ಪುಷ್ಪಾ ಜಗದೀಶ್ ತಂಡ "ನಾನೇಕೆ ಬಡವನೋ ನಾನೇಕೆ ಪರದೇಸಿ" ಭಾವಗೀತೆ ಶೈಲಿಯಲ್ಲಿ ಹಾಡಿದರು. ಈ ಹಾಡನ್ನು ಪುಷ್ಪಾ ಅವರು ದಿವಂಗತ ಮೈಸೂರ್ ಅನಂತಸ್ವಾಮಿಯವರಿಗೆ ಅರ್ಪಣೆ ಮಾಡಿದರು. ಕಟ್ಟ ಕಡೆಯದಾಗಿ "ಆತ್ಮ ನಿವೇದನಂ" ವಿಧಾನದಲ್ಲಿ ಲಿವರ್ಪೂಲ್ ಭಜನೆ ಗುಂಪು "ನಾನೇನು ಮಾಡಿದೆನು" ಹಾಡಿದರು. ಎಲ್ಲಾ ಹಾಡುಗಳಿಗೂ ಶ್ರೀ ಶ್ರೀನಾಥ್ ಮತ್ತು ಶ್ರೀ ಉದಯ್ ಶಿವಮೂರ್ತಿಯವರು ತಬಲ ನುಡಿಸಿದರು.

ಕಾರ್ಯಕ್ರಮದ ಸಮಯ ಸೂಚಿಕೆ ಒಂದು ಗಂಟೆಗೆ ಅಂತ್ಯ ಎಂದಿತ್ತು. ಸರಿಯಾಗಿ ಹನ್ನೆರಡು ಮುಕ್ಕಾಲಿಗೆ ದೇವರ ಆರತಿ ಮತ್ತು ಪೂಜೆಯಾಗಿ, ಸಭಿಕರು ಕೂಡ ಸೇರಿ "ಭಾಗ್ಯದ ಲಕ್ಷ್ಮಿ ಬಾರಮ್ಮ" ಹಾಡಿ ಸಾಕ್ಷಾತ್ ಲಕ್ಷ್ಮಿಯನ್ನು ಕಣ್ಣು ತುಂಬಿಕೊಳ್ಳುವಂತೆ ಮಾಡಿದರು

ಸರಿಯಾಗಿ ಮಧ್ಯಾನ್ಹ ಒಂದು ಗಂಟೆಗೆ ಎಲ್ಲರಿಗೂ ಬಿಸಿಯಾದ ಬಿಸಿಬೇಳೆ ಭಾತ್, ಮೊಸರನ್ನ, ಕಡ್ಲೆ ಕಾಳು ಗುಗ್ಗರಿ, ಬೂಂದಿಲಾಡು, ಹಪ್ಪಳ, ಉಪ್ಪಿನಕಾಯಿ ಮತ್ತು ಮಜ್ಜಿಗೆ ಬಡಿಸಲಾಯಿತು. ಹಿರಿಯರು, ಕಿರಿಯರೂ ಸೇರಿ ಊಟದ ಜೊತೆಗೆ ಮಾತು ಕಥೆ ಆನಂದಿಸಿದರು.

ಪುರಂದರ ಸಮಿತಿಯವರು ಸಹಾಯ ಮಾಡಿದ ಎಲ್ಲರಿಗೂ ಧನ್ಯವಾದಗಳನ್ನು ಅರ್ಪಿಸಿದರು. ದಾಸರ ಹಾಡುಗಳನ್ನು ಕೇಳಿ, ಮೆಲುಕು ಹಾಕುತ್ತಾ ಹೊರಟ ಜನರಿಗೆ ಫೆಬ್ರವರಿಯ ಮೊದಲ ಭಾನುವಾರ "ಮಾನವ ಜನ್ಮ ದೊಡ್ಡದಾಗುವಂತೆ" ಮಾಡಿತ್ತು. ▪

ವರದಿ: ಸ್ಮಿತಾ ಮೇಲ್ಕೋಟೆ
ಚಿತ್ರಗಳು: ರೇಖಾ ಕಾಂತ್

ಸಂಪಾದಕೀಯ

ಬದರಿ ತ್ಯಾಮಗೊಂಡ್ಲು

ಸಾಕ್ಷಾತ್ಕಾರ ಎಂಬ ಹೆಸರಿನ ಚಲನಚಿತ್ರದ ಒಂದು ಅಮೋಘ ಹಾಡು "ಒಲವೆ ಜೀವನ ಸಾಕ್ಷಾತ್ಕಾರ" ಎಂದು. ಈ ಹಾಡು, ನಾಯಕ ನಾಯಕಿ ಸುತ್ತಾ ಚಿತ್ರೀಕರಿಸಲಾಗಿದೆ ನಿಜ. ಆದರೆ ಆ ಗೀತೆಯ ಸಾಹಿತ್ಯ ನೋಡಿದಾಗ, ಒಲವು ಎಲ್ಲೆಲ್ಲಿ ಸಹಜವಾಗಿ ಕಾಣುತ್ತದೆ ಎಂಬುದರ ಪರಿಚಯ ಮಾಡಿಕೊಡುತ್ತದೆ. ಧುಮ್ಮಿಕ್ಕಿ ಹರಿಯುವ ಜಲಧಾರೆಯಲ್ಲಿ, ದುಂಬಿಯ ಝೇಂಕಾರದಲ್ಲಿ, ಹೂವಿನ ಪರಿಮಳದಲ್ಲಿ ಒಲವಿದೆ ಎಂದು ಹೇಳುತ್ತಾ ಪಂಚಮದಲ್ಲಿ ಕೂಗುವ ಕೋಗಿಲೆಯ ಸ್ವರದಲ್ಲಿ, ಭೂಮಿಯ ಚೆಲುವಲ್ಲೂ ಒಲವಿದೆ ಎಂದು ವಿಸ್ತರಿಸುತ್ತದೆ. ಫೆಬ್ರವರಿ ಎಂದರೆ "ವ್ಯಾಲೆಂಟೈನ್ಸ್ ಡೇ" ಎಂಬುದರ ನೆನಪು ತಟ್ಟನೆ ಬರುವುದರಿಂದ ಈ ಪೀಠಿಕೆ ಮಾಡಿದೆ.

ಈ ಹಾಡಿನಿಂದ ನಮಗೆ ತಿಳಿಯುವ ಇನ್ನೊಂದು ಮುಖ್ಯ ಅಂಶವೆಂದರೆ "ಒಲವಿನ ಆರಾಧನೆಗೆ, ಒಲವೆಂಬುದೇ ಹೂವು" ಮತ್ತು "ಒಲವು ಬದುಕಿಗೆ ಬಂಗಾರದ ಸಮಾನ ಕೂಡ" ಎಂದು. ನಾವು ದಿನ ನಿತ್ಯದ ಬದುಕಿನಲ್ಲಿ ನೆಮ್ಮದಿ ಶಾಂತಿಗಾಗಿ ಹಾತೊರೆಯುತ್ತಿರುತ್ತೀವಿ. ಬಹುತೇಕ ಬಾರಿ ನಮ್ಮ ಸುತ್ತ ಮುತ್ತ ಹೆಣೆದುಕೊಂಡಿರುವ ಸಂಬಂಧಗಳು ಪ್ರೀತಿ ತೋರುತ್ತಿದ್ದರೂ ಅದರ ಅರಿವು ನಮಗಾಗಿರುವುದಿಲ್ಲ. ಮತ್ತೆಷ್ಟೋ ಬಾರಿ ಅವರ ಕಷ್ಟ ಸುಖ ಕೇಳುವಷ್ಟೂ ಪುರುಸೊತ್ತು ಮಾಡಿಕೊಳ್ಳದೆ ಕಾಲ ದೂಡಿಕೊಳ್ಳುತ್ತೀವಿ. ಕೆಲವೊಮ್ಮೆ ಅಡ್ಡಬರುವ ಯಾವುದೊ ಅಹಂನಿಂದ ಮಾತು ಕಥೆ ನಿಲ್ಲಿಸುತ್ತೀವಿ.

ನಿಜ, ಮನುಷ್ಯ ಅಂದಮೇಲೆ ರಾಗ ದ್ವೇಷಾದಿಗಳು ಇರುತ್ತವೆ. ಆದರೆ ಅದನ್ನು ಮೀರಿ ನಮ್ಮ ಸಹಜವಾದ ಪ್ರೇಮ ಸ್ವರೂಪದಿಂದ ಜನರೊಡನೆ ಬೆರೆತಾಗ, ಅಲ್ಲಿ ಉದಯಿಸುವ ಸಂತೋಷ ಸುತ್ತ ಮುತ್ತಲಿನವರಲ್ಲಿ ಆಪ್ಯಾಯತೆಯನ್ನು ಹುಟ್ಟುಹಾಕುತ್ತದೆ ಮತ್ತು ಹಾಗೆ ಬೆಳೆಯುವ ಆ ಒಳ್ಳೆಯ ಸಂಬಂಧವು ಒಂದು ಒಳ್ಳೆಯ ಸಮಾಜ ನಿರ್ಮಾಣಕ್ಕೆ ಕಾರಣವಾಗುತ್ತದೆ ಅಲ್ಲವೇ!

ಹೆಚ್ಚಾದರೆ ಅಮೃತವೂ ವಿಷವೆನ್ನುವಂತೆ, ಪ್ರೇಮ ಅಥವಾ ಒಲವನ್ನು ಹಿತಮಿತವಾಗಿ ಉಪಯೋಗಿಸಲ್ಪಡಬೇಕೇ ವಿನಃ ಸ್ವೇಚ್ಛಾಚಾರ ಮೈದೋರಬಾರದು ಎನ್ನುವ ಎಚ್ಚರಿಕೆ ನಮ್ಮ ಮನಸ್ಸಿಗೆ ತಿಳಿದಿರಬೇಕು. ಅಡಿಲೇಡ್ ಕನ್ನಡಿಗರಾದ ಕೃಷ್ಣ ಪ್ರಸಾದ್ ಅವರ ಚುಟುಕವೊಂದು ಹೀಗಿದೆ "ಚುಂಬಿಸುವವರು ಇಲ್ಲಿ ಬಹಳ, ಆದರೆ ಎದೆಯಲಿ ಪ್ರೇಮವ ಬಿಂಬಿಸುವವರು ವಿರಳ". ತುಂಬಾ ಅಗಾಧವಾದ ಅರ್ಥ ತುಂಬಿಕೊಂಡ ಪುಟ್ಟ ಸಾಲಿದು. ಒಲವು ತೋರ್ಪಡಿಕೆಗೆ ಮೀಸಲಾಗಿರದೆ, ಪ್ರೇಮದ ಅಂಕುರವು ನಮ್ಮ ನಮ್ಮ ಹೃದಯದಲ್ಲಿ ಆಗಬೇಕು. ಆಗ ಮಾತ್ರ ಜೀವನದ ಸಾಕ್ಷಾತ್ಕಾರ ಸರಾಗವಾಗಿ ಹರಿಯುವ ನದಿಯಂತೆ ಒಲವೆಂಬ ಧಾರೆಯಿಂದ ಆಗುತ್ತದೆಯಲ್ಲವೇ! ಎಲ್ಲರಲ್ಲೂ ಒಲವಿನ ಸಾಕ್ಷಾತ್ಕಾರವಾಗಲಿ ▪

ನಾ (ವರಿಯದ) ಕಸ್ತೂರಿ – ಭಾಗ ೧

ಲೇಖಕರು: ಬೇಲೂರು ರಾಮಮೂರ್ತಿ

ನಾ. ಕಸ್ತೂರಿ (ಜನನ : 25.12.1897 – ಮರಣ 14.8.1987) ಎಂದು ಖ್ಯಾತರಾದ ನಾರಾಯಣ ರಂಗನಾಥ ಕಸ್ತೂರಿಯವರು ಹುಟ್ಟಿದ್ದು ಕೇರಳದ ತಿರುಪುನಿತ್ತೂರು ಎಂಬ ಗ್ರಾಮದಲ್ಲಿ. ಅವರ ತಂದೆ ನಾರಾಯಣ, ವಕೀಲರ ಕಛೇರಿಯಲ್ಲಿ ಕೆಲಸ ಮಾಡುತ್ತಿದ್ದರು. ಕಸ್ತೂರಿಯವರಿಗೆ ಕೇವಲ 6 ವರ್ಷ ವಯಸ್ಸಾಗಿದ್ದಾಗ ಅವರ ತಂದೆ ತೀರಿಕೊಂಡರು. ನಂತರ ಕಸ್ತೂರಿಯವರು ಅವರ ತಾಯಿಯ ತಂದೆ ಅಂದರೆ ಅಜ್ಜನ ಆರೈಕೆಯಲ್ಲಿ ಬೆಳೆದರು. ಎಸ್.ಎಸ್.ಎಲ್.ಸಿ. ಪಾಸಾದ ಮೇಲೆ ಎರ್ನಾಕುಲಮ್ ಕಾಲೇಜಿನಲ್ಲಿ ಇಂಟರ್ ಮೀಡಿಯಟ್ ಓದಿದರು. ನಂತರ ತಿರುವನಂತಪುರದ ಕಾಲೇಜಿನಲ್ಲಿ ಬಿ.ಎ. ಪದವಿ ಪಡೆದರು.

ತಿರುವನಂತಪುರದ ಪ್ರೌಢಶಾಲೆಯಲ್ಲಿ ಕಸ್ತೂರಿಯವರು ಅಧ್ಯಾಪಕ ವೃತ್ತಿ ಹಿಡಿದರು. ಜೊತೆ ಜೊತೆಗೆ ಸಂಜೆ ಕಾಲೇಜಿನಲ್ಲಿ ಕಾನೂನು ಓದನ್ನೂ ಮುಂದುವರಿಸಿದರು. ಅವರಲ್ಲಿ ಬರವಣಿಗೆ ಹುಚ್ಚು ಪ್ರಾರಂಭವಾದದ್ದು ಪೀಪಲ್ ಫ್ರೆಂಡ್ ಎನ್ನುವ ಪತ್ರಿಕೆಗೆ ಲೇಖನಗಳನ್ನು ಬರೆಯುವುದರ ಮೂಲಕ. ಜೊತೆಗೆ ಹೈಸ್ಕೂಲು ಮತ್ತೆ ಕಾಲೇಜಿನಲ್ಲಿ ತಾವೇ ನಾಟಕಗಳನ್ನು ಬರೆದು ಆಡಿಸುತ್ತಿದ್ದರು.

ಕಸ್ತೂರಿಯವರು ತಮ್ಮ 14ನೆ ವಯಸ್ಸಿನಲ್ಲಿಯೇ ತಂದೆಯ ತಂಗಿಯ ಮಗಳನ್ನು ಮದುವೆಯಾಗಿ ಗೃಹಸ್ಥಾಶ್ರಮಕ್ಕೂ ಕಾಲಿಟ್ಟರು. ಅವರು ಕನ್ನಡದ ಬಗೆಗೆ ಅರಿವೇ ಇರದ ದಿನಗಳಲ್ಲಿ ಅವರು ಮೈಸೂರಿನ ಡಿಬಿಸಿ ಹೈಸ್ಕೂಲಿನಲ್ಲಿ ಅಧ್ಯಾಪಕರಾಗಿ ಸೇರಿದರು. ಅಲ್ಲಿಂದ ಮುಂದೆ ಅವರು ಬನುಮಯ್ಯ ಕಾಲೇಜಿನಲ್ಲಿ ಉಪನ್ಯಾಸಕರಾದರು. ಚರಿತ್ರೆ, ಇಂಗ್ಲಿಷ್ ಮತ್ತು ಅರ್ಥ ಶಾಸ್ತ್ರ ಬೋಧಿಸುತ್ತಿದ್ದರು. ಆಗ ಕನ್ನಡ ಕಲಿಯಲು ಪ್ರಾರಂಭಿಸಿದ ಕಸ್ತೂರಿಯವರು ಕನ್ನಡದಲ್ಲಿ ಇರುವ ಸೊಗಡನ್ನು ಈ ಹಿಂದೆ ಯಾರೂ ಅನಾವರಣಗೊಳಿಸಿರದ ರೀತಿ ಹೊರತಂದರು. ಕನ್ನಡಕ್ಕೆ ಒಂದು ಘನತೆಯನ್ನು ತಂದುಕೊಟ್ಟರು. ಕಸ್ತೂರಿಯವರು ಮೈಸೂರಿನಲ್ಲೇ ಅಲ್ಲದೆ, ಶಿವಮೊಗ್ಗ, ದಾವಣಗೆರೆ ಕಾಲೇಜಿಗಳಲ್ಲೂ ಅಧ್ಯಾಪಕ ವೃತ್ತಿ ನಡೆಸಿದರು.

ಹುಟ್ಟಿನಿಂದ ಮಲೆಯಾಳಿ ಆದರೂ ಮೈಸೂರಿಗೆ ಬಂದು ಕನ್ನಡ ಕಲಿತು ಕನ್ನಡ ಕಸ್ತೂರಿ ಎನ್ನುವುದನ್ನು ಸಾಬೀತು ಮಾಡಿದವರು ನಾ. ಕಸ್ತೂರಿಯವರು. ಕನ್ನಡವನ್ನು ಇಷ್ಟು ಶ್ರೀಮಂತವಾಗಿ ಬಳಸಬಹುದೇ ಅಂತ ಕನ್ನಡಿಗರೇ ಮೂಗಿನ ಮೇಲೆ ಬೆರಳಿಟ್ಟುಕೊಳ್ಳುವಂತೆ ಮಾಡಿದ ಕೀರ್ತಿ ಕಸ್ತೂರಿಯವರದು. ಅವರು ವೃತ್ತಿ ಪ್ರಾರಂಭ ಮಾಡಿದ್ದು ಮೈಸೂರಿನ ಮಹಾರಾಜ ಕಾಲೇಜಿನಲ್ಲಿ ಇತಿಹಾಸದ ಉಪಾಧ್ಯಾಯರಾಗಿ. ನಂತರ ಅವರು ಕನ್ನಡ ಕಲಿತು ಕನ್ನಡದ ಅಧ್ಯಾಪಕರಾದರು. ಇದರ ಜೊತೆಜೊತೆಗೆ ಅವರು ಇತರೆ ಹವ್ಯಾಸಗಳನ್ನು ಬೆಳೆಸಿಕೊಂಡು ಸುತ್ತುಮುತ್ತಲಿನವರಿಗೆ ಆತ್ಮೀಯರಾದರು. ಮೈಸೂರಿನಲ್ಲಿ ಮೊಟ್ಟ ಮೊದಲು ಆಕಾಶವಾಣಿ ಕೇಂದ್ರವೊಂದನ್ನು ಪ್ರಾರಂಭಿಸಲಾಯಿತು. ಅದರ ವಿವರ ಹೀಗಿದೆ. ಮೈಸೂರಿನಲ್ಲಿ ಶ್ರೀ ಎಂ. ವಿ. ಗೋಪಾಲಸ್ವಾಮಿಯವರು, ಶ್ರೀಸಾಮಾನ್ಯನಿಗೆ ಶಿಕ್ಷಣ ಎಂಬ ಒಂದು ಅವಧಿಯ ಕಾರ್ಯಕ್ರಮವನ್ನು ಪ್ರಾರಂಬಿಸಬೇಕು ಅಂತ ಹಂಬಲಿಸಿದ್ದರು. ಮೈಸೂರು ನಗರಪಾಲಿಕೆಯವರು ಕೊಟ್ಟ ಅನುದಾನದಿಂದ ಮತ್ತು ಗೋಪಾಲಸ್ವಾಮಿಯವರು ಹಾಲೆಂಡಿನಿಂದ ತಂದ ಒಂದು ಟ್ರಾನ್ಸ್‌ಮಿಟರ್ ಸಹಾಯದಿಂದ ಕೆಲಸ ಪ್ರಾರಂಭವಾಯಿತು. ಆದರೆ ಈ ಕೇಂದ್ರಕ್ಕೆ ಏನು ಹೆಸರಿಡಬೇಕು ಎನ್ನುವ ಜಿಜ್ಞಾಸೆ ಮೂಡಿದಾಗ ಕಸ್ತೂರಿಯವರು ಸೂಚಿಸಿದ ಆಕಾಶವಾಣಿ ಎನ್ನುವ ಹೆಸರು ಎಲ್ಲರಿಗೂ ಸಮ್ಮತಿಯಾಯಿತು. ಅಂದು ಆಕಾಶವಾಣಿ ಎನ್ನುವ ಹೆಸರಿಟ್ಟುಕೊಂಡು ಮೈಸೂರಿನಲ್ಲಿ ಪ್ರಸಾರ ಮಾಡಿದ ಕೇಂದ್ರ ಇಂದು ಭಾರತದಾದ್ಯಂತ ಬೆಳೆದಿದೆ. ಎಲ್ಲಕ್ಕೂ ಆಕಾಶವಾಣಿ ಎನ್ನುವ ಹೆಸರೇ ಬಳಕೆಯಾಗಿದೆ. ಇದೊಂದು ಕಸ್ತೂರಿಯವರ ಹೆಗ್ಗಳಿಕೆ. ಅವರ ಎಲ್ಲಾ ಕೃತಿಗಳು ಅವರ ಲಾಲಿತ್ಯಪೂರ್ಣ ಪ್ರಬಂಧಗಳಿಗೆ ಸಾಕ್ಷಿಯಾಗಿವೆ. ಕೈಲಾಸಂ ಅವರದು ಒಂದು ರೀತಿಯ ಮಾತುಗಾರಿಕೆಯಾದರೆ, ಕಸ್ತೂರಿಯವರದು ಇನ್ನೊಂದು ರೀತಿ. ಕಸ್ತೂರಿಯವರು ರಾಶಿಯವರ ಜೊತೆ ಸೇರಿ ಕೊರವಂಜಿ ಹಾಸ್ಯ ಮಾಸಪತ್ರಿಕೆಯನ್ನು ಇಪ್ಪತ್ತೈದು ವರ್ಷಗಳ ಕಾಲ ಸಮರ್ಥವಾಗಿ ನಡೆಸಿಕೊಂಡು ಬಂದಿದ್ದು ಕನ್ನಡದ ಹಾಸ್ಯ ಸಾಹಿತ್ಯಕ್ಕೆ ಒಂದು ಭದ್ರವಾದ ಬುನಾದಿ ಹಾಕಿಕೊಟ್ಟಿತು. ಅಣಕುಹಾಡುಗಳು ಕಸ್ತೂರಿಯವರ ಹಾಸ್ಯದ ಇನ್ನೊಂದು ಮಗ್ಗುಲು.

ಕಾಲೇಜಿನಲ್ಲಿ ಅನೇಕ ಅಶು ನಾಟಕಗಳನ್ನು ಬರೆದು ಆಡಿಸಿದರು. ಅಂದರೆ ಬೆಳಗ್ಗೆ ಎಲ್ಲರೂ ಸೇರಿದಾಗ ಸಂಜೆ ನಾವೊಂದು ನಾಟಕ ಆಡೋಣ ಅಂತ ತೀರ್ಮಾನಿಸುವುದು. ಕಸ್ತೂರಿಯವರೇ ನಾಟಕದ ಥಾಪನ್ನು ಮೂಡಿಸುವುದು. ನಂತರ ಎಲ್ಲರೂ ಸೇರಿದಾಗ ನಾಟಕ ಹೀಗಿರುತ್ತೆ ಅಂತ ಬರೀ ಬಾಯಿಮಾತಲ್ಲೇ ಅವರಿಗೆಲ್ಲ ತಿಳಿಸಿ ನಾಟಕ ಆಡಿಸೋದು. ಅವರನ್ನು ಆಗ ತಮಾಷೆಯಾಗಿ ನಾಟಕದ ಕಸ್ತೂರಿ ಎಂದೇ ಕರೆಯುತ್ತಿದ್ದರು.

ಅವರ ಬಹು ಮೆಚ್ಚುಗೆಯ ಕೃತಿ ಪಾತಾಳದಲ್ಲಿ ಪಾಪಚ್ಚಿ. ಅದರಲ್ಲಿ ಪಾಪಚ್ಚಿಯ ಚಮತ್ಕಾರಗಳು ಅನೇಕ. ಅವಳು ಹೇಳುವ ಒಂದು ಪದ್ಯ ಹೀಗಿದೆ.

ಮುಂದಿನ ಪುಟ ನೋಡಿ ...

ಒಂದು ಮೂರು ಚಕ್ಕುಲಿ ಚೂರು
ಐದು ಎರಡು ಉರಿಗೆ ಹೊರಡು
ನಾಲ್ಕು ಎಂಟು ಅಜ್ಜಿಯ ಗಂಟು
ಏಳು ಆರು ಮೆಣಸಿನ ಸಾರು
ಒಂಭತ್ತು ಹತ್ತು ಎಂಜಿಲೆಲೆ ಎತ್ತು

ಪಾಪಚ್ಚಿ ಇರುವ ಕವನಗಳನ್ನು ತಿರುಚಿ ತಿರುಚಿ ಹೇಳುವುದರಲ್ಲಿ ನಿಷ್ಣಾತಳು. ನಮಗೆಲ್ಲ ಗೊತ್ತಿರುವ ಹಾಗೆ ನಾಯಿ ಇಲಿಯನ್ನು ಕಂಡರೆ ಅಟ್ಟಿಸಿಕೊಂಡು ಹೋಗುತ್ತದೆ. ಕೆಲವು ವೇಳೆ ಅದನ್ನು ನುಂಗಿಬಿಡುತ್ತದೆ. ಅಂಥಾ ಒಂದು ನಾಯಿಯ ಹಾಡು ಹೀಗಿದೆ.

ಟೈಗರೆಂಬ ನಾಯಿ ತನ್ನ
ನೆರೆಯಲಿದ್ದ ಇಲಿಯ ಕರೆದು
ನಿನ್ನ ಮೇಲೆ ತಪ್ಪು ಹೊರಿಸಿ
ಜಡ್ಜಿ ಮುಂದೆ ನಿಲ್ಲಿಸುವೆ
ಬಾರೇ ಬೇಗ ಎಂದಿತು
ಇಲಿಯು ಪಾಪ, ಅತ್ತು ಕರೆದು
ಕೇಸು ಗೀಸು ಜಡ್ಜಿ, ಗಿಡ್ಜಿ
ಬೇಡ ಬಿಡಿರಿ ಎನ್ನಲು
ನಾನೇ ಲಾಯರ್ ನಾನೇ ಜಡ್ಜಿ
ಎಂದು ನಾಯಿ ಬೊಗುಳುತಾ
ಮರಣ ಶಿಕ್ಷೆ ವಿಧಿಸಿತು.

ಒಂದು ಹಾಡಿನ ಅಥವಾ ಪದ್ಯದ ಸಾಲಿಗೆ ಇನ್ನೊಂದು ಮುದ ಕೊಡುವಂಥ ಸಾಲನ್ನು ಸೇರಿಸುವುದರಲ್ಲಿ ಕಸ್ತೂರಿ ಸಿದ್ದಹಸ್ತರು. ಅಣಕುವಾಡುಗಳ ಕೆಲವು ಝಲಕ್ ನೋಡಬೇಕೆಂದರೆ :

ಕುಮಾರ ಸ್ವಾಮಿಯು ಹಾಡಿದನೆಂದರೆ
ಸಭೆಯಲಿ ಗುಡುಗೇ ಮೊಳಗುವುದು
ಕೋಪವು ಕಣ್ಣಲಿ ಸಿಡಿಯುವುದು, ಬಾಯಲಿ
ಶಾಪದ ಪದ ತುಳುಕಾಡುವುದು

ನಿದ್ದೆಯ ಲೋಕದಿ ಕನಸಿನ ಲೈಬ್ರರಿ
ತಿರುವಿದೆ ನುಂಗಿದೆ ಪುಟಗಳ ಮುರಿದು
ನೀರನು ಕುಡಿದೆ ಬುರುಡೆಯ ಕೆರೆದೆ
ಕಾಗದ ತುಂಬಾ ಗರಗರ ಬರೆದೆ

ಹಾಸ್ಯವನ್ನು ವಿಜೃಂಬಿಸುವುದೇ ಅದರ ಮಾತಿನ ಮತ್ತು ಬರವಣಿಗೆಯ ಮುಖ್ಯ ಇದ್ದೇಶ. ತಮಗೆ ಅನಾರೋಗ್ಯವಾದಾಗ ಡಾಕ್ಟರ ಬಳಿ ಹೋಗಬೇಕಾಗಿ ಬಂದಾಗ ಮಲವನ್ನು ಶೀಷೆಯಲ್ಲಿ ಹಾಕಿಕೊಂಡು ಹೋಗಬೇಕಾದ ಪ್ರಸಂಗವನ್ನು ವಿವರಿಸುತ್ತಾ ಕಸ್ತೂರಿಯವರು ಡಾಕ್ಟರ ಷಾಪಿಗೆ ಹೋಗುವಾಗ ಮಲ ತುಂಬಿದ ಶೀಷೆಯ ಮೇಲೆ ಕಸ್ತೂರಿ ಅಂತ ಬರ್ಕೊಂಡು ಹೋಗಬೇಕಲ್ಲ ಎನ್ನುತ್ತಾರೆ. ದೊಡ್ಡವರೊಂದಿಗೆ ದೊಡ್ಡವರಾಗಿ ಮಕ್ಕಳೊಂದಿಗೆ ಮಕ್ಕಳಾಗಿ ಇದ್ದವರು ಕಸ್ತೂರಿ.

ಕಸ್ತೂರಿಯವರು ರಾಶಿಯವರನ್ನು (ಇವರು ಎಂ ಶಿವರಾಂ - ಪ್ರಖ್ಯಾತ ವೈದ್ಯರು - ಇವರ ಕಾವ್ಯ ನಾಮ ರಾಶಿ) ಆಗಾಗ ಭೇಟಿಯಾಗುತ್ತಿದ್ದಾಗ ಅವರು ತರಿಸುತ್ತಿದ್ದ ಇಂಗ್ಲಿಷಿನ ಪಂಚ್ ಪತ್ರಿಕೆಯನ್ನು ಓದುತ್ತಿದ್ದರು. ಅದರಲ್ಲಿರುತ್ತಿದ್ದ ಹಾಸ್ಯ ಬರಹಗಳು, ವ್ಯಂಗ್ಯಚಿತ್ರಗಳು ಮುಂತಾದುವು ಕಸ್ತೂರಿಯವರನ್ನು ಸೆಳೆಯುತ್ತಿದ್ದವು. ಆಗ ಅವರ ಮನದಲ್ಲಿ ಹುದುಗಿದ್ದೆ ಒಂದು ಆಸೆ, ನಮ್ಮ ಕನ್ನಡದಲ್ಲೂ ಇಂಥಾ ಪತ್ರಿಕೆಯೊಂದು ಇದ್ದರೆ ಎಷ್ಟು ಚೆನ್ನಾಗಿರೋದು ಅಂತ. ಹಾಗೆ ಹುಟ್ಟಿದ್ದೇ ಕನ್ನಡದ ಕೊರವಂಜಿ ಹಾಸ್ಯ ಮಾಸ ಪತ್ರಿಕೆ. ರಾಶಿಯವರ ಜೊತೆ ಸೇರಿ ಇಂಗ್ಲಿಷ್‌ನ ಪಂಚ್ ಮಾದರಿ ಪತ್ರಿಕೆಯಾದ ಕೊರವಂಜಿಯನ್ನು ಇಪ್ಪತೈದು ವರ್ಷಗಳ ಕಾಲ ಸಮರ್ಥವಾಗಿ ನಡೆಸಿಕೊಂಡು ಬಂದಿದ್ದು ಕನ್ನಡದ ಹಾಸ್ಯ ಸಾಹಿತ್ಯಕ್ಕೆ ಒಂದು ಭದ್ರವಾದ ಬುನಾದಿ ಹಾಕಿಕೊಟ್ಟಿತು. ಹಾಸ್ಯವನ್ನು ವಿಜೃಂಬಿಸುವುದೇ ಅದರ ಮುಖ್ಯ ಇದ್ದೇಶ. ಇಂದಿನ ಅಂತಾರಾಷ್ಟ್ರೀಯ ಮಟ್ಟದ ಖ್ಯಾತಿಯ ವ್ಯಂಗ್ಯ ಚಿತ್ರಕಾರ ಆರ್.ಕೆ. ಲಕ್ಷ್ಮಣ್ ಅವರು ತಮ್ಮ ವ್ಯಂಗ್ಯಚಿತ್ರ ರಚನೆ ಪ್ರಾರಂಭ ಮಾಡಿದ್ದು ಕನ್ನಡದ ಕೊರವಂಜಿಯಿಂದ ಎನ್ನುವುದು ಕನ್ನಡದ ಮಟ್ಟಿಗೆ ಒಂದು ಹೆಗ್ಗಳಿಕೆ. ಅಷ್ಟೇಕೆ, ಕನ್ನಡದ ಪ್ರಮುಖ ಹಾಸ್ಯ ಬರಹಗಾರರಾದ ದಾಶರಥಿ ದೀಕ್ಷಿತ್, ಟಿ. ಸುನಂದಮ್ಮ, ಕೊಳ್ಳೇಗಾಲದ ರಾಮಾನುಜ, ಕೇಫ, ಹಾ.ರಾ. ಮುಂತಾದವರೆಲ್ಲ ಬರಹ ಪ್ರಾರಂಭಿಸಿದ್ದು ಕೊರವಂಜಿಯಿಂದ. ಕಸ್ತೂರಿಯವರು ಕೊರವಂಜಿಯಲ್ಲಿ ಕಸ್ತೂರಿ, ಕಾಮತ್, ಕೇಸರಿ, ಖಾರಾಂತ, ನಾ,ಕಸ್ತೂರಿ, ನಾ.ಕಾ. ರುದ್ರಮ್ಮ, ಶ್ರೀಮತಿ ರುದ್ರಮ್ಮ, ಶ್ರೀಮತಿ ಕೇಸರಿ, ಪಾಟಾಳಿ ಮುಂತಾದ ಅನೇಕ ಹೆಸರುಗಳಿಂದ ಲೇಖನ ಬರೆಯುತ್ತಿದ್ದರು. ಕೊರವಂಜಿ 25 ವರ್ಷಗಳ ಕಾಲ ಕನ್ನಡಿಗರನ್ನು ರಂಜಿಸಿ, ಸುಸ್ತಾಗಿ, ಆರ್ಥಿಕವಾಗಿ ಕುಸಿದು ಬಿದ್ದು ತನ್ನ ಪ್ರಕಟಣೆಯನ್ನು ನಿಲ್ಲಿಸಿತು. ಆಗ ಉದಯಿಸಿದ್ದೇ ಅಪರಂಜಿ ಮಾಸಪತ್ರಿಕೆ. ಕೊರವಂಜಿಗೆ ಆದ ಗತಿಯೇ ಅಪರಂಜಿಗೂ ಆಗದೇ ಇರಲಿ ಎಂತ ಕೊರವಂಜಿ ಅಪರಂಜಿ ಟ್ರಸ್ಟ್ ಪ್ರಾರಂಭಿಸಿ ಅದರ ಮೂಲಕ ರಾಶಿಯವರ ಮಗ ಎಂ.ಶಿವಕುಮಾರ್ ಅವರು ಸಂಪಾದಕರಾಗಿಯೂ, ಶ್ರೀ ಬೇಲೂರು ರಾಮಮೂರ್ತಿಯವರು ಉಪಸಂಪಾದಕರಾಗಿಯೂ ಕಾರ್ಯನಿರ್ವಹಿಸುತ್ತಾ ಇಂದಿಗೂ ಅಪರಂಜಿ ಜೀವಂತವಾಗಿರುವಂತೆ ನೋಡಿಕೊಂಡಿದ್ದಾರೆ. ನಾ ಕಸ್ತೂರಿಯವರು ತಮ್ಮ ವೈಯಕ್ತಿಕ ಜೀವನದ ಘಟನೆಗಳಿಗೆ ಹಾಸ್ಯಲೇಪನ ಕೊಡುತ್ತಿದ್ದುದು ಒಂದು ವಿಶೇಷವೇ ಸರಿ. ಅವುಗಳಲ್ಲಿ ಕೆಲವು ಸ್ಯಾಂಪಲ್ ಗಳನ್ನು ನೋಡೋಣ.

ಅವರ ಸಹೋದ್ಯೋಗಿಯೊಬ್ಬರು ಕಸ್ತೂರಿಯವರಿಗೆ ಬಂದ ಪ್ರಮೋಷನ್ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿ ಕಾಲೇಜಿನಲ್ಲಿ ಎಲ್ಲರೊಂದಿಗೂ ಮಾತಾಡುತ್ತಿದ್ದರಂತೆ, ಆಗ ಕಸ್ತೂರಿಯವರು ಸ್ವಲ್ಪವೂ ಸಿಟ್ಟು ಮಾಡಿಕೊಳ್ಳದೇ ಅವರನ್ನು ತಮ್ಮ ಕೋಣೆಗೆ ಕರೆಸಿ, "ನೋಡು ಯಾವುದೋ ಒಂದು ಕೆಲಸವನ್ನು ನಾನು ಮಾತ್ರ ಮಾಡೋಕೆ ಸಾಧ್ಯ, ಅದು ನಿನ್ನಿಂದ ಸಾಧ್ಯವಿಲ್ಲ ಅದಕ್ಕೇ ನನ್ನನ್ನು ಪ್ರಿನ್ಸಿಪಾಲ್ ಆಗಿ ಪ್ರಮೋಷನ್ ಮಾಡಿದಾರೆ ಅಂದರು". ಆಗ ಅವರು ಮತ್ತೆ ಛಾಲೆಂಜ್ ಮಾಡಿದಾಗ ಒಂದು ಒಪ್ಪಂದಕ್ಕೆ ಬಂದರು. ಕಾಲೇಜಿನ ಕಾಮನ್ ರೂಮಿಗೆ ಎಲ್ಲರನ್ನೂ ಕರೆಸೋದು. ಅವರೆಲ್ಲರ ಎದುರಿಗೆ ಕಸ್ತೂರಿಯವರು ಒಂದು ಕೆಲಸವನ್ನು ಮಾಡುವುದು. ಅದೇ ಕೆಲಸವನ್ನು ಸಹೋದ್ಯೋಗಿಯೂ ಮಾಡಿದರೆ ಅವರಿಗೆ ಪ್ರಿನ್ಸಿಪಾಲ್ ಹುದ್ದೆಯನ್ನು ಬಿಟ್ಟುಕೊಡುವುದು. ಇಲ್ಲವಾದಲ್ಲಿ ಸಹೋದ್ಯೋಗಿಯು ಎಲ್ಲರಿಗೂ ಮಸಾಲೆ ದೋಸೆ ಕೊಡಿಸಬೇಕು ಎನ್ನುವ ಷರತ್ತು. ಸಹೋದ್ಯೋಗಿಯು ಷರತ್ತಿಗೆ ಒಪ್ಪಿಕೊಂಡರು. ಆಗ ಕಸ್ತೂರಿಯವರು ದೊಡ್ಡದಾಗಿ ಬಾಯಿ ತೆಗೆದು ತಮ್ಮ ಕಟ್ಟಿಸಿದ ಹಲ್ಲು ಸೆಟ್ಟನ್ನು ತೆಗೆದಿಟ್ಟರು. ಸಹೋದ್ಯೋಗಿಯ ಕಡೆ ನೋಡಿ ನೀವೂ ತೆಗೆದಿಡಿ, ನಿಮಗೇ ಪ್ರಿನ್ಸಿಪಾಲ್ ಹುದ್ದೆ ಕೊಡಿಸುತ್ತೇನೆ ಅಂದರು. ಸಹೋದ್ಯೋಗಿ ನಾಚಿಕೆಯಿಂದ ತಲೆ ತಗ್ಗಿಸಿದರು. ಯಾಕೆಂದರೆ ಅವರದು ಕಟ್ಟಿಸಿದ ಹಲ್ಲಲ್ಲ. ಹೀಗೆ ಎಂಥಾ ಸನ್ನಿವೇಶವನ್ನೂ ಸಹಜವಾದ ಹಾಸ್ಯಕ್ಕೆ ತರ್ಜುಮೆ ಮಾಡೋ ತಾಕತ್ತು ಕಸ್ತೂರಿಯವರಿಗಿತ್ತು.

ಇವರ ಸಾಹಿತ್ಯ ಕೃತಿಗಳಲ್ಲಿ ಪ್ರಮುಖವಾದುವು ಎಂದರೆ, ಪಾತಾಳದಲ್ಲಿ ಪಾಪಚ್ಚಿ, ಗಾಳಿಗೋಪುರ, ಶಂಖವಾದ್ಯ, ಚಕ್ರದೃಷ್ಟಿ, ಗೃಹದಾರಣ್ಯಕ, ದಿಲ್ಲೀಶ್ವರ ದಿನಚರಿ, ಚೆಂಗೂಲಿ ಚೆಲುವ, ಸಮಗ್ರ ಹಾಸ್ಯ, ರಂಗನಾಯಕಿ, ಕೆಂಪ ಮೈಸೂರಿಗೆ ಹೋದದ್ದು, ಅಣಕು, ಮಿಣಕು, ನೊಂದ ಜೀವಿ, ಕಾಡಾನೆ, ಗಗ್ಗಯ್ಯನ ಗಡಿಬಿಡಿ, ರಾಮಕೃಷ್ಣಯ್ಯನ ದರ್ಬಾರು, ಬ್ಯಾಂಕ್ ದಿವಾಳಿ, ಚಿತ್ರ ವಿಚಿತ್ರ, ವರ ಪರೀಕ್ಷೆ, ತಾಪತ್ರಯ ತಪ್ಪಿತು, ಹೆಡ್ ಮಾಸ್ಟರನ ಮಗಳು ಮುಂತಾದ ನಾಟಕಗಳು ...

ಮುಂದಿನ ಸಂಚಿಕೆಯಲ್ಲಿ ಮುಂದುವರಿಯುವುದು

ರಾಂ ರಾಮ

ಇದು ಹಾಸ್ಯ ಪುಟ

ಶ್ರೀ ರಾಮನಾಥ್ ಅವರು ಉತ್ತರಿಸುವ "ನೀವು ಕೇಳಿದಿರಿ" ಬ್ಲಾಗ್ನಲ್ಲಿ ಲಭ್ಯ. ಕೆಳಗಿನ ಲಿಂಕ್ ಕ್ಲಿಕ್ ಮಾಡಿ

ನೀವು ಕೇಳಿದಿರಿ

ರಾಮನಾಥ್
ಭಾಷಣಕಾರರು, ಹಾಸ್ಯ ಲೇಖಕರು

ಎಳ್ಳು-ಬೆಲ್ಲಕ್ಕೆ ಎಳ್ಳು-ನೀರು

"ವಾವ್! ಎಳ್ಳು ಮಾಡಿದ್ದೀರಾ! ಸೂಪರ್" ಎದುರು ಫ್ಲಾಟಿನ ಹರ್ಷಿತಾಳ ಉದ್ಗಾರ ನನಗೂ ಸಂತಸ ತಂದಿತು.

"ಇರು. ಬೌಲ್ ನಲ್ಲಿ ಹಾಕಿಕೊಡ್ತೀನಿ"

"ಷೂರ್ ಆಂಟಿ. ಆದರೆ... ಇಫ್ ಯೂ ಡೋಂಟ್ ಮೈಂಡ್, ಆ ಜ್ಯಾಗರಿ ತೆಗೆದುಬಿಡಿ. ಐ ಹೇಟ್ ಸ್ವೀಟ್ಸ್"

ಸರಿಯೆಂದು ಬೆಲ್ಲವನ್ನೆಲ್ಲ ಹೆಕ್ಕಿ ತೆಗೆದೆ.

"ಓಹ್ ನೋ. ಆಂಟಿ, ಕೊಬ್ಬರಿ ಹಾಕಿದ್ದೀರಾ? ಪ್ಲೀಸ್ ಆಂಟಿ. ಅದು ಕೊಲೆಸ್ಟ್ರಾಲ್"

"ಅದಕ್ಯಾಕೆ ಯೋಚನೆ? ಸ್ಟ್ರಾಲ್ ಮಾಡಿದರೆ ಕೊಲೆಸ್ಟ್ರಾಲ್ ಕೊಲೆ ಆಗತ್ತೆ"

"ಸ್ಟಿಲ್ ಆಂಟಿ... ನೋ ಆಂಟಿ"

ಹೆಕ್ಕಿ ತೆಗೆದ ಕೊಬ್ಬರಿ ಹೆಕ್ಕಿ ತೆಗೆದ ಬೆಲ್ಲವನ್ನು ಸೇರಿತು. ಹರ್ಷಿತಾ ಮತ್ತೆ ಎಳ್ಳಿನ ಮಿಶ್ರಣವನ್ನು ವಿಜ್ಞಾನಿಯೊಬ್ಬ ಮೈಕ್ರಾಸ್ಕೋಪ್ ನಿಂದ ಬ್ಯಾಕ್ಟೀರಿಯಾಗಳನ್ನು ವೀಕ್ಷಿಸುವಂತೆ ವೀಕ್ಷಿಸಿದಳು.

"ಪ್ಲೀಸ್ ಆಂಟಿ, ಈ ಗ್ರೌಂಡ್ ನಟ್ಸ್ ತಿಂದರೆ ನನಗೆ ಪಿಂಪಲ್ಸ್ ಬಂದ್ಬಿಡತ್ತೆ. ಆಯಿಲ್ ರಿಚ್ ನಟ್ಸ್ ಯೂ ನೋ"

ಐ ನ್ಯೂ. ಅವನ್ನೂ ತೆಗೆದೆ.

"ದಿಸ್ ಪೊಪ್ಪು,ಐ ಜಸ್ಟ್ ಲವ್ ಇಟ್"

"ಗುಡ್. ತೊಗೊ"

"ಐ ವುಡ್ ಲವ್ ಟು ಆಂಟಿ. ಆದರೆ... ಅದು ಅಸಿಡಿಟಿ ಆಗತ್ತೆ ಆಂಟಿ. ಸೋ...."

ಹುರಿಗಡಲೆಯನ್ನೂ ಹೆಕ್ಕಿದ್ದಾಯಿತು. ಇನ್ನು ಉಳಿದದ್ದು ಬರೀ ಎಳ್ಳು!

"ಆಂಟಿ, ದಟ್ ಮಿಕ್ಸ್ ವಾಸ್ ಸೋ ಎಂಟೈಸಿಂಗ್. ಈಗ ಬರೀ ಎಳ್ಳೇ ಉಳಿದಿದೆ. ಐ ಹೇಟ್ ದ ಸ್ಮೆಲ್ ಆಫ್ ಇಟ್"

ಎಳ್ಳು ತಿನ್ನುವ ಸಂಭ್ರಮಕ್ಕೆ ಎಳ್ಳು ನೀರು ಬಿಟ್ಟಾಯಿತು!

"ಹೋಗಲಿ, ಬಾಳೆಹಣ್ಣು ತೊಗೊ" ಪುಟ್ಟ ಬಾಳೆಹಣ್ಣನ್ನು ಪುಟ್ಟಿಯ ಕೈಯಲ್ಲಿಟ್ಟೆ.

"ಸೋ ನೈಸ್. ಅದನ್ನು ಮ್ಯಾಷ್ ಮಾಡಿ ಮ್ಯಾನಿಕ್ಯೂರ್, ಪೆಡಿಕ್ಯೂರ್ ಗೆ ಯೂಸ್ ಮಾಡ್ತೀನಿ"

ಹಬ್ಬದ ಮೊದಲ ಅತಿಥಿಗೆ ಎಳ್ಳು ನೈವೇದ್ಯ ನೀಡುವ ನನ್ನ ಆಸೆಗೆ ಸರಿಯಾದ ಮಂಗಳಾರತಿ ಆಗುತ್ತಿತ್ತು!

ಕಡೆಯ ಪ್ರಯತ್ನವನ್ನು ಮಾಡಲು ತೀರ್ಮಾನಿಸಿದೆ. ಒಳಹೋಗಿ ಒಂದು ಸಣ್ಣ ಕಬ್ಬಿನ ತುಂಡನ್ನು ತೆಗೆದುಕೊಂಡುಬಂದೆ. ಅದನ್ನು ನೋಡಿಯೇ ಹರ್ಷಿತಾ ಸಂತಸದಿಂದ "ವಾವ್! ಹೌ ಡೆಲಿಷಿಯಸ್" ಎಂದಳು. ಹಿಂದೆಯೇ "ಆಂಟಿ, ಅದು ನಾರ್ಮಲ್ ಷುಗರ್ ಕೇನಾ?" ಎಂದಳು.

"ಹೌದು"

"ಸೋ ಸಾರಿ ಆಂಟಿ. ಷುಗರ್ ಲೆಸ್ ಷುಗರ್ ಕೇನ್ ಅಥವಾ ಷುಗರ್ ಫ್ರೀ ಷುಗರ್ ಕೇನ್ ಆಗಿದ್ದಿದ್ರೆ ಐ ವುಡ್ ಹ್ಯಾವ್ ಜಸ್ಟ್ ಲವ್ಡ್ ಟು ಮಂಚ್ ಆನ್ ಇಟ್"

"ಹೋಗಲಿ, ಸ್ವಲ್ಪ ಹುಗ್ಗಿಯನ್ನಾದರೂ ತಿನ್ನು"

"ಸಾರಿ ಆಂಟಿ. ಹುಗ್ಗಿಯಲ್ಲಿ ಫೀ ಇರತ್ತಲ್ಲಾ....."

"ವಾಟ್ ಎ ರಾಂಗ್ ನಂಬರ್ ರೈಟ್ ಇನ್ ದ ಮಾರ್ನಿಂಗೂ ಆಫ್ ಎ ಫೆಸ್ಟಿವಲ್ಲೂ. ಹೋಗು, ನಿಮ್ಮಮ್ಮನ್ನ ಕಳುಹಿಸು" ಎಂದೆ. ಹರ್ಷಿತಾಳ ಮಮ್ಮಿ ಫರ್ಷಿತಾ ಬಂದರು. ಅವರ ಮುಂದೆ ಎಳ್ಳಿನ ಮಿಶ್ರಣ ಇಟ್ಟೆ.

ಅವರು ತಮ್ಮ ಡೆಂಚರ್ಸ್ ನನ್ನ ಮುಂದೆ ಇಟ್ಟರು!

ಕಟ್ಟಿಸಿಕೊಂಡ ಹಲ್ಲಿನಿಂದ ಹೆಚ್ಚೆಂದರೆ ಬಾಳೆಹಣ್ಣು ತಿನ್ನಬಹುದಷ್ಟೆ. ಹೋಂ ಮೇಡ್ ಎಳ್ಳಿಗೆ ಇನ್ನೂ ಪರಬಾಯಪ್ರವೇಶದ ಯೋಗ ಕೂಡಿ ಬರಲಿಲ್ಲ.

ಮೇಜಿನ ಮೇಲಿನ ಟೆಲಿಫೋನ್ ರಿಂಗಣಿಸಿತು. ಅಪಾರ್ಟ್ ಮೆಂಟಿನ ಪಹರೆದಾರ ನನ್ನನ್ನು ಕಾಣಲು ಯಾರೋ ದಂಪತಿಗಳು ಬಂದಿರುವುದಾಗಿ ಹೇಳಿ, ಅವರಿಗೆ ಫೋನಿತ್ತ.

"ಸಾರಿ ಟು ಹ್ಯಾವ್ ಕಮ್ ವಿತೌಟ್ ಸರ್ವಿಂಗ್ ನೋಟೀಸ್. ನಾನು ಕಮಲಿ. ವಾದಿರಾಜ್ ಜೊತೆ ಬಂದಿದ್ದೇನೆ"

ಎಳ್ಳು ಬೀರಲು ಬಂದಿದ್ದ ದಂಪತಿಗಳನ್ನು ಸ್ವಾಗತಿಸಿ, ಎಳ್ಳು ನೀಡಿ, ಎಳ್ಳು ಪಡೆದೆ. ಎಳ್ಳಿನ ಮಿಶ್ರಣದ ಜೊತೆಜೊತೆಗೇ ಒಂದು ಕವರ್ ಸಹ ಇತ್ತು. ಕವರ್ ಓಪನ್ ಮಾಡಿದರೆ ಒಳಗೊಂದು ಪತ್ರ. .

ಮುಂದಿನ ಪುಟ ನೋಡಿ ...

"ಏನಿದು?"

"ನಮ್ಮೆಜಮಾನ್ರು ವಕೀಲರಲ್ವಾ! ಏನೇ ಮಾಡಿದ್ರೂ ಲೀಗಲ್ ಆಗೇ ಇರ್ಬೇಕು ಅಂದ್ರು. ಅದಕ್ಕೇ ಆ ಗಿಫ್ಟ್ ಡೀಡ್"

ಕಮಲಿ ನನ್ನ ದೊಡ್ಡಮ್ಮನ ಮಗಳು. ಸಾಕಷ್ಟು ಆಸ್ತಿ ಇರುವವಳು. ಗಿಫ್ಟ್ ಡೀಡ್ ಎಂದುದರಿಂದ ಸಂಭ್ರಮದಿಂದ ಕಾಗದವನ್ನು ತೆಗೆದು ಓದಲಾರಂಭಿಸಿದೆ. ಆ ಪತ್ರದ ನಕಲನ್ನೇ ನಿಮ್ಮ ಮುಂದೆ ಇರಿಸುತ್ತಿದ್ದೇನೆ

ಇಕ್ಷುದಂಡಖಂಡ ದಾನಪತ್ರ

ಸನ್ ಎರಡುಸಾವಿರದ ಹದಿನಾಲ್ಕನೆಯ ಇಸವಿ ಜನವರಿ ಹದಿನೈದನೆಯ ದಿನಾಂಕದಂದು ತಂಗಳೂರಿನ ಮಾಲಿನ್ಯಪುರ ಬಡಾವಣೆಯ ವಸೂಲಿ ರಸ್ತೆಯ 420ನೆಯ ನಂಬರ್ ಮನೆಯಲ್ಲಿ ವಾಸವಾಗಿರುವ ಶ್ರೀ ವಾದಿರಾಜ್ ರವರ ಧರ್ಮಪತ್ನಿಯಾದ ಕಮಲಿ ಆದ ನಾನು ಶ್ರೀಮಾನ್ ಪೆದ್ದಪ್ಪನವರ ಪತ್ನಿಯಾದ ಮೊದ್ದಮ್ಮನವರಾದ ನಿಮಗೆ ಪೊಂಗಲ್ ಹಬ್ಬದ ಪ್ರಯುಕ್ತ ನೀಡುತ್ತಿರುವ ಇಕ್ಷುದಂಡಖಂಡ ಉರುಫ್ ಕಬ್ಬಿನತುಂಡಿನ ದಾನದ ಕ್ರಮವೇನೆಂದರೆ:

ಆದಾಗಿ ಇದೇ ತಂಗಳೂರಿನ ಕೈಲಾಸಪಾಳ್ಯದಲ್ಲಿ ತನ್ನೂರಾದ ಕ್ಯಾತೆಸಂದ್ರದಲ್ಲಿ ತನ್ನ ಜಮೀನಿನಲ್ಲೇ ತನ್ನ ಹಣವನ್ನೇ ಹಾಕಿ ಬೆಳೆಸಿದ ಕಬ್ಬಿನ ಜಲ್ಲೆಯ ತುಂಡನ್ನು ಕ್ಯಾತೆಸಂದ್ರದ ಕೇಸಪ್ಪನವರ ಮಗನಾದ ಕ್ಯಾತೆಯಪ್ಪನಿಂದ ನಾನು ಶುದ್ಧಕ್ರಯವಾಗಿ ಪಡೆದ ಎರಡು ಅಡಿ ಉದ್ದ ಮತ್ತು ಸರಾಸರಿ ಎರಡು ಇಂಚು ಸುತ್ತಳತೆ ಇದ್ದು, ಮೂರು ಗೆಣ್ಣುಗಳಿರುವ ಈ ಪತ್ರದಲ್ಲಿ ಇನ್ನು ಮುಂದೆ ಸ್ವತ್ತು ಎಂದು ಕರೆಯಲ್ಪಡುವ ಈ ಕಬ್ಬಿನ ತುಂಡನ್ನು ಈ ಕೆಳಕಂಡ ಷರತ್ತುಗಳ ಮೇರೆಗೆ ನಿಮಗೆ ದಾನವಾಗಿ ನೀಡುತ್ತಿದ್ದೇನೆ.

1. ಸದರಿ ಸ್ವತ್ತು ಮೇಲ್ಕಾಣಿಸಿದ ಕ್ಯಾತೆಯಪ್ಪನವರ ಸ್ವಂತ ಸ್ವತ್ತಾಗಿದ್ದು ಈ ಸ್ವತ್ತಿನ ಮೇಲೆ ಯಾವುದೇ ವಿಧವಾದ ಸಾಲ, ಪರಭಾರೆ, ಅಡಮಾನ, ತೆರಿಗೆ, ಇತ್ಯಾದಿಗಳು ಇರುವುದಿಲ್ಲ.

2. ಸದರಿ ಸ್ವತ್ತು ಯಾವುದೇ ಬ್ಯಾಂಕಿನ ನೋಟೀಸು, ಇತರೆ ಬಾಕಿಗಳ ನೋಟೀಸು, ಮುಟ್ಟುಗೋಲು, ಜಪ್ತಿಗಳ ವ್ಯಾಪ್ತಿಗೆ ಬಂದಿರುವುದಿಲ್ಲ.

3. ಸದರಿ ಸ್ವತ್ತಿನ ಮೇಲೆ ಕ್ಯಾತೆಯಪ್ಪನವರ ಅಣ್ಣತಮ್ಮಂದಿರಿಗೇ ಆಗಲಿ, ಅಪ್ಪ ಅಮ್ಮಂದಿರಿಗೇ ಆಗಲಿ, ಅಕ್ಕ ತಂಗಿಯರಿಗೇ ಆಗಲಿ ಅಥವಾ ಇನ್ನಾವ ವಾರಸುದಾರರಿಗೇ ಆಗಲಿ ಹಕ್ಕು ಇರುವುದಿಲ್ಲ. ಇದು ಅವರ ಸ್ವಂತ ಆಸ್ತಿಯಾಗಿರುತ್ತದೆ ಮತ್ತು ಅದನ್ನು ಕೊಂಡ ದಿನದಿಂದ ಅದನ್ನು ನನ್ನ ಹೆಸರಿಗೆ ಮಾಡಿಕೊಂಡು ನಾನು ಅದರ ಸಂಪೂರ್ಣ ಹಕ್ಕುಳ್ಳ ಮಾಲಿಕಳಾಗಿರುತ್ತೇನೆ.

4. ಸ್ವತ್ತನ್ನು ನಾನು ಖರೀದಿಸಿದ ದಿನದಿಂದ ಸದರಿ ಸ್ವತ್ತು ನನ್ನ ಪೂರ್ಣ ಅಧೀನದಲ್ಲಿ ಇದೆ ಮತ್ತು ಇದನ್ನು ಕೊಳ್ಳುವಾಗಲಾಗಲಿ, ನಂತರವಾಗಲಿ ಇದರ ಮೇಲೆ ಯಾವುದೇ ವಿಧವಾದ ಸಾಲ ಮಾಡಿಲ್ಲದಿರುವುದರಿಂದ ಸದರಿ ಸ್ವತ್ತು ಯಾವುದೇ ಋಣಭಾರಗಳಿಗೆ ಒಳಗಾಗದ ಸ್ವತ್ತಾಗಿದೆ.

5. ಈ ಸ್ವತ್ತನ್ನು ಖರೀದಿಸುವಾಗ ನನಗೆ ಸಂದ ಕ್ರಯಪತ್ರದ ನಿಯಮಗಳ ಮೂಲಕ ನಾನು ಇದನ್ನು ಹೊಂದಲು, ಅನುಭವಿಸಲು, ಭೋಗ್ಯಕ್ಕೆ ಹಾಕಲು, ಬಾಡಿಗೆಗೆ ನೀಡಲು ಮತ್ತು ಮಾರಲು ಸಂಪೂರ್ಣ ಹಕ್ಕುದಾರಳಾಗಿದ್ದು, ಈ ದಿವಸ ಈ ಸ್ವತ್ತನ್ನು ನನ್ನ ಖುದ್ದು ಮನೋರಾಜಿಯಿಂದ ನಿಮಗೆ ದಾನವಾಗಿ ನೀಡುತ್ತಿದ್ದೇನೆ.

6. ಈ ಕಬ್ಬು ಬಹಳ ಸಿಹಿಯಾಗಿರುವುದರಿಂದ ದಾನ ನೀಡಿದ ಈ ದಿನದಿಂದ ನೀವು ಈ ಸಿಹಿಯಂಶವನ್ನು ಘನರೂಪದಲ್ಲಿಯೂ, ದ್ರವರೂಪದಲ್ಲಿಯೂ ಹೊಂದಲು ಸಂಪೂರ್ಣ ಹಕ್ಕನ್ನು ಹೊಂದಿರುತ್ತೀರಿ.

7. ಈ ಕಬ್ಬಿನ ತುಂಡನ್ನು ಅಗಿಯಲು, ಜಗಿಯಲು, ಉಗಿಯಲು, ಸವರಲು, ನೆಕ್ಕಲು, ಎಂಜಲು ಮಾಡಿ ಪಕ್ಕಕ್ಕಿಡಲು, ಮತ್ತೆ ಇನ್ನಾವುದಾದರೂ ರೂಪದಲ್ಲಿ ಘನರೂಪದಲ್ಲಿ ಸೇವಿಸಲು ನಿಮಗೆ ಸಂಪೂರ್ಣ ಹಕ್ಕು ಇರುತ್ತದೆ.

8. ಈ ಕಬ್ಬನ್ನು ದ್ರವರೂಪಕ್ಕಿಳಿಸಿ ಆ ಹಾಲನ್ನು ಹಾಗೆಯೂ, ನಿಂಬೆಹಣ್ಣು ಬೆರಿಸಿಯೂ ಅಥವಾ ಕೇನೋಲಾದಲ್ಲಿ ನೀಡುವ ಎಲ್ಲಾ ಮಿಶ್ರಣಗಳೊಂದಿಗೆ ಬೆರೆಸಿಯೂ ಕುಡಿಯಲು ನೀವು ಹಕ್ಕುದಾರರಾಗಿರುತ್ತೀರಿ. ಆದರೆ ಅದಕ್ಕೆ ತಗಲುವ ಯಾವುದೇ ಖರ್ಚನ್ನು ನೀವೇ ಭರಿಸಬೇಕು.

9. ಕಬ್ಬಿನ ಹಾಲಿನ ದೋಸೆ ಬಲು ಚೆನ್ನ. ಹಾಗೆ ನೀವೇನಾದರೂ ದೋಸೆ ಮಾಡಿಕೊಂಡು ನೀವೇ ತಿಂದರೂ, ಅಥವಾ ಇತರರಿಗೆ ತಿನ್ನಲು ಕೊಟ್ಟರೂ ಆ ದೋಸೆಯ ಮಂದ ಗುಣದಿಂದ ತಿಂದವರಿಗೆ ಹೊಟ್ಟೆನೋವು, ಅಜೀರ್ಣ ಇತ್ಯಾದಿಗಳು ಉಂಟಾದರೆ ಅದರಿಂದ ಉದ್ಭವಿಸಬಹುದಾದ ಕಾನೂನಿನ ಮತ್ತು ಕಾನೂನೇತರ ಸಮಸ್ಯೆಗಳ ನಿವಾರಣೆ ನಿಮ್ಮದೇ ಜವಾಬ್ದಾರಿಯಾಗಿರುತ್ತದೆ.

10. ಈ ಕಬ್ಬಿನಲ್ಲಿ ಮೂರು ಗೆಣ್ಣುಗಳಿದ್ದು, ಮೂರೂ ಗೆಣ್ಣುಗಳು ಬಹಳ ಗಟ್ಟಿಯಿರುವುದರಿಂದ, ನೀವು ಕಬ್ಬನ್ನು ಜಗಿದು, ಅಗಿದು, ತಿನ್ನುವಾಗ ನಿಮ್ಮ ಹಲ್ಲುಗಳು ಜಖಂ ಆದರೆ ಅಥವಾ ಕಿತ್ತುಬಂದು ಹಲ್ಲು ಕಟ್ಟಿಸಿಕೊಳ್ಳಬೇಕಾದ ಪ್ರಸಂಗ ಉಂಟಾದಲ್ಲಿ ಸಂಬಂಧಿತ ಡೆಂಟಲ್ ಖರ್ಚುಗಳಿಗೆ ನಾವು ಜವಾಬ್ದಾರರಲ್ಲ.

11. ಹಲ್ಲನ್ನು ಸಿಗಿದು ತಿನ್ನುವಾಗ ತುಟಿಗಳಿಗೆ ಗಾಯವಾಗಿ ರಕ್ತ ಒಸರಿದರೆ ತತ್ಸಂಬಂಧಿತ ಬ್ಯಾಂಡೇಜ್, ವೈದ್ಯಕೀಯ ಖರ್ಚು ಇತ್ಯಾದಿಗಳನ್ನು ನೀವೇ ಭರಿಸತಕ್ಕದ್ದು.

ಮುಂದಿನ ಪುಟ ನೋಡಿ ...

12. ಈ ಕಬ್ಬು ಬಹಳ ಸಿಹಿಯಾಗಿದೆ ಎಂದು ಈ ಮೊದಲೇ ತಿಳಿಸಲ್ಪಟ್ಟಿದೆ. ಈ ಕಬ್ಬನ್ನು ನೀವು ಯಾರಾದರೂ ಮಧುಮೇಹ ಇರುವವರಿಗೆ ದಾನ, ಕ್ರಯ, ಭೋಗ್ಯ, ಬಾಡಿಗೆಗಳಿಗೆ ನೀಡಿ, ಅದನ್ನು ಅವರು ಸವಿದುದರಿಂದ ಯಾವುದೇ ಪರಿಣಾಮಗಳು ಉಂಟಾದರೂ ಅವಕ್ಕೆಲ್ಲಾ ನೀವೇ ಜವಾಬ್ದಾರರಾಗಿರುತ್ತೀರಿ.
13. ಈ ಕಬ್ಬು ಬಹಳ ಗಟ್ಟಿಯಾಗಿರುವುದರಿಂದ ಮನೆಗೆ ನುಗ್ಗಿದ ದನವನ್ನೋ, ನಾಯಿಯನ್ನೋ, ಸೇಲ್ಸ್ ಏಜೆಂಟ್ ಗಳನ್ನೋ ಓಡಿಸಲು ಬಳಸಿದಲ್ಲಿ ಅಂತಹ ಕಾರ್ಯಗಳಿಂದ ಸಂಭವಿಸಬಹುದಾದ ಎಲ್ಲಾ ಕಾನೂನು ಮತ್ತು ಕಾನೂನೇತರ ಸಮಸ್ಯೆಗಳನ್ನು ನೀವೇ ನಿಮ್ಮ ಸ್ವಂತ ಖರ್ಚಿನಲ್ಲೇ ಪರಿಹರಿಸಿಕೊಳ್ಳತಕ್ಕದ್ದು.
14. ನಾನು ನೀಡುತ್ತಿರುವ ಸಮಯದಲ್ಲಿ ಕಬ್ಬು ರಸಭರಿತವಾಗಿದೆ. ಇದನ್ನು ನೀವು ಫ್ರಿಡ್ಜ್ ನಲ್ಲಿಟ್ಟ ಕಾರಣಕ್ಕಾಗಿಯೋ ಅಥವಾ ಇನ್ನಾವುದೋ ಕಾರಣಗಳಿಗಾಗಿಯೋ ರಸವು ಇಲ್ಲವಾಗಿ ಕಬ್ಬು ಶುಷ್ಕವಾದರೆ ಅದಕ್ಕೆ ನಾವು ಜವಾಬ್ದಾರರಲ್ಲ.
15. ಕಬ್ಬಿನ ರಸ ತೆಗೆದನಂತರ ಅದನ್ನು ನೀವು ಪೇಪರ್ ತಯಾರಿಸುವ ಕಂಪನಿಗೆ ನೀಡಿ, ಆ ಪೇಪರ್ ದಿನಪತ್ರಿಕೆಗೆ ಬಳಸಲ್ಪಟ್ಟು, ಆ ದಿನಪತ್ರಿಕೆಯಲ್ಲಿ ಯಾವುದೋ ಸುದ್ದಿ ಅಚ್ಚಾಗಿ, ಆ ಅಚ್ಚಾದ ಸುದ್ದಿಯಿಂದ ಸಂಭವಿಸಬಹುದಾದ ಯಾವುದೇ ಸಮಸ್ಯೆಗಳಿಗೂ, ತಂಟೆ ತಕರಾರುಗಳಿಗೂ ನೀವೇ ಸಂಪೂರ್ಣ ಜವಾಬ್ದಾರರಾಗಿರುತ್ತೀರಿ.

ಷೆಡ್ಯೂಲು

ಎರಡು ಅಡಿ ಉದ್ದ ಮತ್ತು ಸರಾಸರಿ ಎರಡು ಇಂಚು ಸುತ್ತಳತೆ ಇದ್ದು, ಮೂರು ಗೆಣ್ಣುಗಳಿರುವ ರಸಭರಿತವಾದ, ಕಂದುಮಿಶ್ರಿತ ಕಪ್ಪು ಬಣ್ಣದ ಹೊರಕವಚ ಇರುವ, ಬಿಳಿಯ ಒಳಮೈಯಿರುವ ಇಡೀ ಕಬ್ಬು.
ಇದರ ಮಾರುಕಟ್ಟೆಯ ಬೆಲೆ ರೂ. 20/- (ಇಪ್ಪತ್ತು ರೂಪಾಯಿಗಳು ಮಾತ್ರ)
ಈ ದಾನಪತ್ರದ ಮೂಲಕ ಪಡೆದ ಸದರಿ ಸ್ವತ್ತನ್ನು ನೀವುಗಳು ವಂಶಪಾರಂಪರ್ಯವಾಗಿ ಪುತ್ರಪೌತ್ರಾದಿಗಳೊಡನೆ ಸಂತೋಷದಿಂದ ಅನುಭವಿಸಿಕೊಂಡುಬಂದು ಅದರಿಂದ ದೊರೆಯಬಹುದಾದ ಸಕಲ ಸೌಭಾಗ್ಯಗಳನ್ನೂ, ಅನುಕೂಲಗಳನ್ನೂ ಪಡೆದು ನೆಮ್ಮದಿಯಿಂದ ಇರತಕ್ಕದ್ದೆಂದು ಹಾರೈಸಿ ನನ್ನ ಖುದ್ದು ಮನೋರಾಜಿಯಿಂದ ಸಾಕ್ಷಿಗಳ ರೂಬುರೂಬು ಬರೆದುಕೊಟ್ಟ ದಾನಪತ್ರಕ್ಕೆ ಸಹಿ:

ಸಾಕ್ಷಿಗಳು
1. ತಿಮ್ಮಣ್ಣ
ವಾದಿರಾಜರ ಅಸಿಸ್ಟೆಂಟ್
ವಾದಿರಾಜರದೇ ವಿಳಾಸ
2. ಹುಚ್ಚಯ್ಯ
ವಾದಿರಾಜರ ಕಕ್ಷಿದಾರ
ಕೊಳಕಾಪುರ, ತಂಗಳೂರು

ಕಮಲಿ
ದಾನ ಕೊಟ್ಟವರು

ಬಿಕ್ಕಳಂ: ವಾದಿರಾಜ, ವಕೀಲರು
ಬಾರ್ ಅಸೋಸಿಯೇಷನ್, ತಂಗಳೂರು

ಪತ್ರ ಓದಿ ಬೆವೆತು ಕುಳಿತೆ.
"ಹಿಂದೆ ಒಂದು ಸಣ್ಣ ಚೀಟಿ ಅಂಟಿಸಿದೆ ನೋಡಿ" ಎಂದರು ವಾದಿರಾಜ್.
ಚೀಟಿಯಲ್ಲಿ "ಈ ದಾನಪತ್ರದ ವಕೀಲೀ ಶುಲ್ಕ ರೂ. 2,000/- (ಎರಡು ಸಾವಿರ ರೂಪಾಯಿಗಳು ಮಾತ್ರ) ಎಂದಿತ್ತು!
ಎರಡು ಸಾವಿರ ತೆತ್ತು ಕಬ್ಬು ಪಡೆದೆ.

ಯಾರೇ ಬಂದರೂ ನಾನು ಎಳ್ಳುಬೀರುವ ಕಡೆಯ ದಿನವಾದ ರಥಸಪ್ತಮಿಯವರೆಗೆ ಊರಿನಲ್ಲಿರುವುದಿಲ್ಲವೆಂದು ಹೇಳು ಎಂದು ಅಪಾರ್ಟ್ಮೆಂಟಿನ ಪಹರೆದಾರರಿಗೆ ತಿಳಿಸಿದ್ದೇನೆ. ಫೋನ್ ಸ್ವಿಚ್ ಆಫ್ ಮಾಡುತ್ತಿದ್ದೇನೆ.
ಟಿಲ್ ದೆನ್, ಸೀ ಯೂ ಆನ್ ವಾಟ್ಸ್ ಆಪ್ ಆರ್ ಸ್ಕೈಪ್. ಬಾಯ್.....!▪

ಶರಪೋವ Special ಮಿಠಾಯಿ

ಲೇಖಕರು: ಕನಕಾಪುರ ನಾರಾಯಣ

ಮರಿಯಾ ಶರಪೋವ ಟೆನ್ನಿಸ್ಸಿಗೆ ಇತ್ತೀಚಿನ ವರ್ಷಗಳಲ್ಲಿ ಹೆಚ್ಚು ಪ್ರೇಕ್ಷಕರನ್ನು ಸೆಳೆದ ಸುಂದರಿ ಎನ್ನುವ ಮಾತು ಉತ್ಪ್ರೇಕ್ಷೆ ಅಲ್ಲ. 2004 ರಲ್ಲಿ Wimbledon, 2006 ರಲ್ಲಿ US open ,2008 ರಲ್ಲಿ Australian open, 2012 ರಲ್ಲಿ French open ಗೆದ್ದಿರುವ ಈಕೆ ಇದೇ ವೇಳೆಯಲ್ಲಿ ನಾಲ್ಕು ರನ್ನರ್ ಸ್ಥಾನವನ್ನೂ ತಲುಪಿದ್ದಾಳೆ. ಮೂಲತಃ ರಷ್ಯಾ ದೇಶದ ಈ ಬೆಡಗಿ ಜನಿಸಿದ್ದು 87ರಲ್ಲಿ ಆದರೂ ಅಮೇರಿಕಾ ಸೇರಿದ್ದು ಆರನೇ ವಯಸ್ಸಿಗೆ,ಆಕೆ ತರಬೇತಿ ಶಿಬಿರ ಸೇರಿದ್ದು ಮಾರ್ಟೀನಾ ನವ್ರಾಟಿಲೋವಾ ಬಳಿ, ಸ್ವತಃ ಮಾರ್ಟೀನಾಳೆ ಮರಿಯಾಳನ್ನು ಒಳ್ಳೆ ತರಬೇತಿ ಪಡೆಯುವ ಸಲಹೆಯ ಮೇರೆಗೆ ಅಮೇರಿಕಾ ಸೇರಿದಳು. ಟೀನೆಜ್ ನಲ್ಲೇ ವಿಂಬಲ್ಡನ್ ಕಿರೀಟ ಈಕೆಗೆ.

ಒಬ್ಬ ಆಟಗಾರ ಒಮ್ಮೆ ಆಸ್ಟ್ರೇಲಿಯನ್ ಓಪನ್ ನಂತಹ ಪಂದ್ಯಾವಳಿಯಲ್ಲಿ ಪ್ರವೇಶ ಪಡೆದು ಪ್ರತಿ ಪಂದ್ಯ ಗೆದ್ದಾಗ ಸಂಪಾದನೆ ಎಷ್ಟಿರಬಹುದು ಊಹಿಸಿ? ಇನ್ನೂರು ಮುನ್ನೂರು ಸಾವಿರ ಡಾಲರ್ ಗಳು ! ಕ್ವಾರ್ಟರ್ ಫೈನಲ್ ತಲುಪಿದರೆ ಇನ್ನೂ ಹೆಚ್ಚು, ಸೆಮೀಸ್ ತಲುಪಿದವರಿಗೆ ಐನೂರು ಸಾವಿರ ಇನ್ನೂ ಫೈನಲ್ ತಲುಪಿದವರಿಗೆ ಮಿಲಿಯನ್ ಗಟ್ಟಿ. ಹೀಗೆ ಪಂದ್ಯದಲ್ಲೇ ಇಷ್ಟು ಹಣ ಗಳಿಸುವ ಈ ಟೆನ್ನಿಸ್ ಪಟುಗಳು ಜಾಹಿರಾತುಗಳಲ್ಲಿ ಇದರಷ್ಟೆ ಹಣ ಗಿಟ್ಟಿಸುತ್ತಾರೆ. ಉದಾಹರಣೆಗೆ ಫೆಡರರ್ ಕಳೆದ ವರ್ಷದ ವಾರ್ಷಿಕ ಆದಾಯ 71 ಮಿಲಿಯನ್ ಡಾಲರ್, ಅತಿ ಚಿಕ್ಕ ವಯಸ್ಕಳಾದ ಶರಪೋವಳ ಕಳೆದ ವರ್ಷದ ಆಟದ ಆದಾಯ 29 ಮಿಲಿಯನ್ ಡಾಲರ್, ಇವಳ ಹಿಂದೆ ಮುಂದೆ ಈ ರೀತಿ ಸಂಭಾವನೆ ಪಡೆಯುವವರು ಇನ್ನೂ ಕೆಲವರು ಇದ್ದರೂ ಇಂದು ಈಕೆಯ ಪ್ರಸ್ತಾಪಕ್ಕೆ ಕಾರಣ ಮುಂದಕ್ಕೆ ಓದಿದಾಗ ನೀವೂ ಓಹೋ ಎಂದು ಹುಬ್ಬೇರಿಸಬಹುದು.

ಮರಿಯಾ ಶರಪೋವಾ ವಿದ್ಯಾಭ್ಯಾಸ ಮಾಡಿದ್ದು ಏನೇ ಇರಲಿ ಆದರೆ ಬಹಳ ವರ್ಷಗಳ ಕಾಲ Nike ಮತ್ತು TAG Heuer ಜೊತೆಗಿನ ಉನ್ನತ ಮಾರ್ಕೆಟಿಂಗ್ ಅಧಿಕಾರಿಗಳ ಸಂಗಡ ಕಾರ್ಯಾನಿರ್ವಹಿಸಿ ಮಾಸ್ಟರ್ಸ್ ಇನ್ ಮಾರ್ಕೆಟ್ಟಿಂಗ್ ಪದವಿಯಷ್ಟೆ ಅನುಭವ ಪಡೆದಳು. 700,000 ಡಾಲರ್ ಸ್ವಂತ ಹೂಡಿಕೆ ಇರುವ "Sugarpova" ಎಂಬ ಮಿಠಾಯಿ ಕಾರ್ಖಾನೆ ಆರಂಭಿಸಿ 2013 ರಲ್ಲಿ 1.3 ಮಿಲಿಯನ್ ಚೀಲಗಳ ಮಾರಾಟ 25 ದೇಶಗಳಲ್ಲಿ ಮಾಡಿದಳು. ಬರೇ ಚೀನಾದಲ್ಲೇ 16000 ಚೀಲಗಳ ಮಾರಾಟ ದಾಖಲಾಯಿತು. ಶರಪೋವಾ ತನ್ನ ಹಣದಲ್ಲಿ ಕೆಲವು ಸಕಾರ್ಯವನ್ನೂ ಮಾಡುತ್ತಿದ್ದಾಳೆ UNDP ಸಂಸ್ಥೆಗೆ $250,000 ದಾನ ಮಾಡಿದ್ದಾಳೆ, Belauras ಶಾಲೆಗಳಿಗೆ $210,000 Scholarship ಗಾಗಿ ಮುಡುಪಿಟ್ಟಿದ್ದಾಳೆ.

ಇಲ್ಲೊಂದು ಹಳೇಯ ಮಾತು ಜ್ಞಾಪಕಕ್ಕೆ ಬರುತ್ತದೆ "ಹತ್ತು ಲಕ್ಷ ಇರುವವನು ತೃಪ್ತನೋ? ಹತ್ತು ಮಕ್ಕಳಿರುವವನು ತೃಪ್ತನೋ?" ಉತ್ತರ - ಹತ್ತು ಮಕ್ಕಳಿರುವವನು. ಏಕೆಂದರೆ ಅವರಿಗೆ ಹೊಟ್ಟೆ ಬಟ್ಟೆಗೆ ಹೊಂದಿಸುವುದೇ ಆತನಿಗೆ ಕಷ್ಟವಾಗಿರುತ್ತದೆ, "ಸಾಕಪ್ಪ ಇನ್ನು ಮಕ್ಕಳು" ಎನ್ನುತ್ತಾನೆ, ಆದರೆ ಹತ್ತು ಲಕ್ಷ ಇರುವಾತ "ಅದನ್ನು ಹೇಗೆ ಇಪ್ಪತ್ತು ಮಾಡಲಿ?" ಆ ಇಪ್ಪತ್ತನ್ನು ಮತ್ತೆ ನಲವತ್ತು ಮಾಡುವ ಯೋಚನೆ. ಕಡೆಗೆ ತೃಪ್ತಿಗೆ ಕತ್ತರಿಯೇ ಇಲ್ಲ.ಹಾಗೇ ಶರಪೋವ ಮುಂದೆ ಸುಗಂಧವುಳ್ಳ ಮೇಣದಬತ್ತಿ, ಸುಗಂಧ ದ್ರವ್ಯ ಇತ್ಯಾದಿಗಳ ಯೋಜನೆ ಹೊಂದಿದ್ದಾಳೆ. 25ಕ್ಕೇ ನಿವೃತ್ತಿ ಹೊಂದುವೆ ಎಂದು ಘೋಷಿಸಿದ ಶರಪೋವಾ ಇನ್ನೂ ಮುಂದುವರೆಸುತ್ತಿರುವುದು ಇದಕ್ಕೆ ಒಂದು ಸಾಕ್ಷಿ.

ಆಸ್ಟ್ರೇಲಿಯಾದಲ್ಲೂ David Jones ನಂತಹ ದೊಡ್ಡ ಅಂಗಡಿಗಳಲ್ಲಿ "Sugarpova" ಬ್ರಾಂಡ್ ಮಿಠಾಯಿ $6 ಡಾಲರ್ ಗಳಿಗೆ ಮಾರಾಟಕ್ಕಿದೆ, ಕೆಲವು ಪತ್ರಿಕೆಗಳು ಆಟಗಾರರು ಇಂಥಾ ಅನಾರೋಗ್ಯಕರ ಸಕ್ಕರೆಯ ಪದಾರ್ಥಕ್ಕೆ ಪ್ರೋತ್ಸಾಹ ಮಾಡುವುದು ಸರಿಯಲ್ಲ ಎನ್ನುವವರಿಗೆ ಆಕೆಯ ಏಜೆಂಟ್ Max Eisenbud ಕೊಟ್ಟ ಹೇಳಿಕೆ ಹೀಗೆ "McDonalds ಮತ್ತು Coca Cola ದಂತಹ ಪದಾರ್ಥಗಳಲ್ಲಿ ಇದಕ್ಕೂ ಹೆಚ್ಚು ಸಕ್ಕರೆಯ ಅಂಶವಿದೆ ಅದನ್ನು ಮಾರಾಟ ಮಾಡಲು ಬಳಸುತ್ತಿರುವುದೂ ಪ್ರಖ್ಯಾತ ಆಟಗಾರರನ್ನೇ" ಖರೆ ಅಲ್ಲವೇ. ಶರಪೋವಾಳ ಸುಂದರ ಮೈಮಾಟ, ಪ್ರತಿ ಹೊಡೆತಕ್ಕೂ ಘರ್ಜಿಸುವ ಆಟ,ಇದರ ಜೊತೆ ಜೊತೆಗೆ ಮಿಠಾಯಿ ಮಾರಾಟ ಎಲ್ಲವೂ ಹೆಚ್ಚು ಹೆಚ್ಚು ಎತ್ತರಕ್ಕೇರುತ್ತಿದೆ, ಅದು ಗೆಲುವಿನ ಗಾಳಿಪಟದಂತೆ ತೋರುತ್ತಿದೆ ▪

ಬ್ಲಾಗ್ ಲೋಕ

ಓದಲು ಚಿತ್ರದ ಕೆಳಗಿರುವ ಲಿಂಕ್ ಕ್ಲಿಕ್ ಮಾಡಿ

ಕನಕಾಪುರ ನಾರಾಯಣ
ಇವರ "ಚಕ್ಕೆ ಮೊಗ್ಗು"

ಸುದರ್ಶನ್. ಏನ್
ಇವರ "ಅನಿವಾಸಿ"

ಬದರಿ ತ್ಯಾಮಗೊಂಡ್ಲು
ಇವರ "ಕಾವ್ಯ ಕಸ್ತೂರಿ"

ಸ್ಮಿತಾ ಮೇಲ್ಕೋಟೆ
ಇವರ "ಮಂದಹಾಸ"

ಕಥಾ ಚೆಲುಮೆ

ಎರಡು ಕಪ್ಪೆಗಳು

ಲೇಖಕರು: ಕನಕಾಪುರ ನಾರಾಯಣ

ಮಳೆಗಾಲದ ಸಮಯ, ಒಂದು ದಿನ ರಾತ್ರಿ ವೇಳೆ ಭೀಕರ ಸಿಡಿಲು, ಗುಡುಗು, ಧಾರಾಕಾರವಾಗಿ ಸುರಿಯುವ ಮಳೆ. ಕಾಡಿನಲ್ಲಿ ತಾವು ವಾಸವಿದ್ದ ಝರಿ ಪ್ರವಾಹದಿಂದುಕ್ಕಿ ಹರಿಯುವುದನ್ನು ಅರಿತ ಕಪ್ಪೆಗಳು ಛಂಗನೆ ನೆಗೆಯುತ್ತಾ ನೆಗೆಯುತ್ತಾ ವಲಸೆ ಹೋಗುತ್ತಿದ್ದವು, ಆಗ ಎರಡು ಕಪ್ಪೆಗಳು ಕತ್ತಲೆಯ ಕಾನನದಿ ಕಣ್ಮಾಣದೆ ಆಳವಾದ ಕಂದರದಲ್ಲಿ ಕಾಲುಜಾರಿ ಬಿದ್ದುಬಿಟ್ಟವು. ಎಷ್ಟು ಪ್ರಯತ್ನಿಸಿದರೂ ಮೇಲಕ್ಕೆ ಎಟುಕದಷ್ಟು ಆಳ, ಎರಡೂ ಕಪ್ಪೆಗಳು ಎಡಬಿಡದೆ ಜಿಗಿಯಲೆತ್ನಿಸಿದವು.

ಉಳಿದ ಕಪ್ಪೆಗಳು ಇದನ್ನು ಕಂಡು " ಅಯ್ಯೋ ಬಿದ್ದುಬಿಟ್ಟಿರಾ, ಅಷ್ಟೇ ಬಿಡಿ ಅಲ್ಲಿದ್ದರೆ ನೀವು ಬದುಕಿದ್ದರೂ ಸತ್ತಂತೆ, ಇನ್ನೇನು ನಿಮ್ಮ ಕಥೆ ಅಷ್ಟೇ" ಎಂದು ಹಾಸ್ಯ ಮಾಡುತ್ತ ನಗಲಾರಂಭಿಸಿದವು, ಈ ಎರಡೂ ಕಪ್ಪೆಗಳು ಬಿಡದೆ ಪ್ರಯತ್ನ ಮಾಡುತ್ತಿದ್ದವು, ಉಳಿದವು ಕೂಗುತ್ತಲೇ ಇದ್ದವು "ಏ ಕೇಳಿಸಲಿಲ್ಲವೇ ನಿಮಗೆ, ನೀವಿನ್ನು ಸತ್ತಂತೆ,...ಸತ್ತಂತೆ," ಅಷ್ಟರಲ್ಲಿ ಒಂದು ಕಪ್ಪೆ ನೆಗೆದೂ ನೆಗೆದೂ ಸುಸ್ತಾಗಿ ತಲೆಕೆಳಗಾಗಿ ಬಿದ್ದು ಪ್ರಾಣ ಬಿಟ್ಟಿತು, ಇನ್ನೊಂದು ಮಾತ್ರ ತನ್ನ ಪ್ರಯತ್ನವನ್ನು ಬಿಡದೇ ಮಾಡಿತ್ತು. ಮೇಲಿದ್ದ ಕಪ್ಪೆಗಳು ತಮ್ಮಪಾಡಿಗೆ ಕೈಚಾಚಿ ಆಡಿಕೊಳ್ಳುತ್ತಾ ಅರಚುತ್ತಲೇ ಇದ್ದವು, ಆದರೆ ಉಳಿದಿದ್ದ ಒಂದೇ ಕಪ್ಪೆ ಎಗರೀ ಎಗರೀ ಸುಸ್ತಾದರೂ ಶಕ್ತಿಮೀರಿ ಮೇಲಕ್ಕೆ ಜಿಗಿದೇ ಬಿಟ್ಟಿತು, ಮೇಲಿದ್ದ ಕಪ್ಪೆಗಳು ಅಚ್ಚರಿಯಿಂದ ಬೆಪ್ಪಾಗಿ ಮುಂದೆಬಂದು ಅದನ್ನು ಅಭಿನಂದಿಸಿದವು, "ನಾವೆಲ್ಲಾ ನಿನ್ನನ್ನು ಅಷ್ಟು ದುರ್ಲಕ್ಷ್ಯದಿಂದ ಕಡೆಗಣಿಸಿದರೂ ನೀನು ಉತ್ಸಾಹ ಕಳೆದುಕೊಳ್ಳದೆ ಜೀವಂತವಾಗಿ ಮೇಲೇರಿ ಬಂದೆ, ನಮ್ಮನು ಕ್ಷಮಿಸು ನಿನ್ನ ಸಾಹಸ ಮೆಚ್ಚುವಂಥದ್ದು" ಎಂದು ಪ್ರಶಂಸಿಸಿದವು, ಅದಕ್ಕೆ ಆ ಕಪ್ಪೆ "ಅಯ್ಯಾ ನೀವೇನು ಹೇಳುತ್ತಿದ್ದೀರೋ ನನಗೊಂದೂ ತಿಳಿಯದು ನನಗೆ ಹುಟ್ಟು ಕಿವುಡು, ನೀವೆಲ್ಲಾ ನನ್ನ ಕಡೆ ನೋಡಿಕೊಂಡು, ಕೈ ಬೀಸುತ್ತಾ ಅಷ್ಟು ಪ್ರೋತ್ಸಾಹಿಸಿದ್ದಕ್ಕೆ ಧನ್ಯವಾದಗಳು" ಎಂದಿತು.

ಈ ಕಥೆಯಲ್ಲಿ ಎರಡು ನೀತಿಗಳಿವೆ.

೧. ಮಾತಿನ ಶಕ್ತಿ ಬಿದ್ದವರನ್ನು ಮೇಲಕ್ಕೂ ಎತ್ತಬಹುದು.

೨. ಕೆಳಕ್ಕೆ ಬಿದ್ದವರನ್ನು ಅದೇ ಮಾತಿನಿಂದ ಧೈರ್ಯಗೆಡಿಸಿದರೆ ಮತ್ತೂ ಪಾತಾಳಕ್ಕೆ ತಳ್ಳಿದಂತಾಗಿ ಮೃತ್ಯುವೇ ಪ್ರಾಪ್ತಿಯಾಗಬಹುದು.▪

ಬಾಳೆಹಣ್ಣಿನ ಹಲ್ವ

ಬೇಕಾಗುವ ಸಾಮಗ್ರಿಗಳು

- 10-12 ಬಾಳೇಹಣ್ಣು , ಒಂದು ಬಟ್ಟಲು ಶುದ್ಧ ತುಪ್ಪ
- ಟೀ ಚಮಚ ಏಲಕ್ಕಿ ಪುಡಿ, ಅರ್ಧ ತೆಂಗಿನ ಕಾಯಿ
- ಒಂದು ಬಟ್ಟಲು ಸಕ್ಕರೆ

ಮಾಡುವ ವಿಧಾನ

- ಬಾಳೇಹಣ್ಣು ಸಿಪ್ಪೆ ಸುಲಿದು ಚೆನ್ನಾಗಿ ಹಿಸುಕಿರಿ
- ಬಾಣಲೆಯಲ್ಲಿ 3 ಚಮಚ ತುಪ್ಪ ಕಾಯಿಸಿ ಬಾಳೆಹಣ್ಣನ್ನು ಹಾಕಿ ಗರಿಗರಿಯಾಗುವ ವರೆಗೂ ಬೇಯಿಸಿ
- ತೆಂಗಿನ ಕಾಯಿತುರಿ,ಸಕ್ಕರೆ ಸೇರಿಸಿ,ತುಪ್ಪವನ್ನು ಸ್ವಲ್ಪಸ್ವಲ್ಪವಾಗಿ ಸೇರಿಸಿ
- ಎಲ್ಲವನ್ನೂ ಕಂದು ಬಣ್ಣ ಬರುವವರೆಗೂ ತಿರುವುತ್ತಿದ್ದು ಸುವಾಸನೆ ಬಂದಮೇಲೆ ಏಲಕ್ಕಿಪುಡಿ ಸೇರಿಸಿ ಒಲೆ ಆರಿಸಿ
- ಬಿಸಿ ಇರುವಾಗಲೇ ತಿನ್ನಲು ಕೊಡಿ

ಇನ್ನೂ ನೂರಾರು ರೆಸಿಪ್ಪಿಗಳಿಗೆ **www.sugamakannada.com** ಗೆ ಭೇಟಿಕೊಡಿ.

ರೆಸಿಪಿ ಕೊಡ್ತೀರಾ!

ಇದೇನ್ಲಾ ಇದು

೧. ಹೊಟ್ಟೆ ಮೇಲೊಂದು ಹೊಟ್ಟೆ ತೂತಿಗೊಂದು ಬೆಣೆ

೨. ಬಗ್ಗಿದರೆ ಬಾಯಿ ಮೇಲೆ, ಎದ್ದರೆ ಎದೆ ಮೇಲೆ

ಉತ್ತರಕ್ಕೆ ಪುಟ ೧೨ ನೋಡಿ

ನೀವೂ ಜಾಹೀರಾತು ನೀಡಲು ಬಯಸುವಿರಾದರೆ ನಮಗೆ ಇ-ಮೇಲ್ ಮಾಡಿ: **horanadachilume@gmail.com**

SRI KRISHNA TRAVEL
Travel with a Smile
Contact Mr Sudheendra Rao EMAIL
Mobile 0415 291 723

choice HOME LOANS
Contact Mr.Sathya Bhat EMAIL
Mobile 0412 918 511

Umesh Nagasandra FT
ABN 55 405 83 51 32
Umesh Nagasandra
Mob: 0401 034 456
Email: umesh61@gmail.com
Web: www.arman.com.au
P.O. Box # 4127, Tranmere North, South Australia-5073, Australia.
Contact Mr Umesh EMAIL
Mobile 0401 034 456

AUSTINDIA SANGAM TRANSPORT
Contact Mr Eranna Gotyal EMAIL
Mobile 0404 215 605

ಬಂಧಿಸು ಬಾ ನನ್ನ ...

ಏಕೆ ತಿಳಿಯದೆ ಹೋದೆ
ನನ್ನೆದೆಯ ಬೇಗೆ
ನೀನಿರದಿರುವ ಧಗೆ
ಸಹಿಸುವುದು ಹೇಗೆ

ಬಗೆ ಬಗೆಯ ನಗೆಗಳಾ
ಮೊಗಗಳಿವೆ ಇಲ್ಲಿ
ಅರಮನೆಯ ಸುರಭೋಗ
ಮೆರೆದಿರುವುದು ಇಲ್ಲಿ

ವಿರಹದಲಿ ಸುಖಪಡಲು
ನಿನ್ನ ಈ ತರುಣಿ
ವಿಹರಿಸುವುದು ಹೇಗೆ
ಸೆರೆ ಸಿಕ್ಕ ಹರಿಣಿ

ಕಾತರದ ಕಾಯುವಿಕೆ
ಕೊನೆಗೊಳ್ಳಲಿಂದೆ
ನನ್ನ ಬಿಡುಗಡೆಯು
ನಿನ್ನ ತೋಳ್ಸೆರೆಯೊಳೆಂದೆ ▪

ರಚನೆ: ಮಾಲು (ಅಡಿಲೈಡ್)

ರಾಧ ಕೃಷ್ಣರ ಪ್ರೇಮ ಸಲ್ಲಾಪ ...

ಚುಕ್ಕಿಗಳ ನೋಡುತ್ತಾ ಕಣ್ಣಲ್ಲಿ ಕಣ್ಣಿಟ್ಟು
ಕೇಳಿದಳು ರಾಧೆ ಕೃಷ್ಣನ್ನ
ಎಷ್ಟೊಂದು ತಾರೆಗಳು ಇರುವಾಗ ನೀನು
ಪ್ರೀತಿಸುವೆಯೇಕೆ ನನ್ನನ್ನ

ಯಾರಿಗೆ ಸಮನೋ ಹೇಳೋ ಮುಕುಂದ
ಯಾಕೆ ಆರಿಸಿದೆ ನನ್ನನ್ನ
ಏನುಂಟೋ ನನ್ನಲ್ಲಿ ಹೇಳೋ ಅರವಿಂದ
ಯಾಕೆ ಬಿಟ್ಟಿರಲಾರೆ ನನ್ನನ್ನ

ನುಡಿದನು ರಾಧೇಯ, ಕೇಳೇ ಸಖಿ
ಪ್ರೀತಿಯು ಬಯಸದು ಏನನ್ನೂ
ನಿನ್ನ ಈ ಮುಗ್ಧ ಕಣ್ಣಲ್ಲಿ ನಾನು
ಕಾಣುತಿರುವೆ ನನ್ನ ಪ್ರತಿಬಿಂಬವನ್ನು

ಹೊಳೆದರೂ ತಾರೆಗಳು ಬಹು ದೂರ ಕಣೆ
ನಿನ್ನಾಲಿಂಗನ ಅವರು ಕೊಡಲಾರರು
ಮಿನುಗಿದರೂ ಇರುವುದು ಮುಗಿಲಾಂತರ ನಡುವೆ
ನನ್ನ ಹತ್ತಿರ ಅವರು ಬರಲಾರರು

ನಿನ್ನ ಒಂದೊಂದು ಅಣುವೂ ಕೂಡ
ಹೇಳುವುದು ಕೇವಲ ನನ್ನ ಹೆಸರು
ಹೀಗೆಂದು ಹೇಳಿದ ಚೆನ್ನಿಗನ ತಬ್ಬಿ
ಜೊತೆಗೂಡಿಸಿದಳು ರಾಧೆ ತನ್ನ ಉಸಿರು ▪

ರಚನೆ: ಬದರಿ ತ್ಯಾಮಗೊಂಡ್ಲು

ಹಾಸ್ಯ ಚಿಲುಮೆ

ಒಂದು ಟ್ರಕ್ ಕೆಟ್ಟು ಅದನ್ನು ರಿಪೇರಿಗೆ ಎಳೆದುಕೊಂಡು ಹೋಗಲು ಇನ್ನೊಂದು ಟೋಯಿಂಗ್ ಟ್ರಕ್ ಬಂದಿತು, ಮಧ್ಯೆ ದಪ್ಪ ಹಗ್ಗ ಕಟ್ಟಿ ಎಳೆದುಕೊಂಡು ಹೋಗುತ್ತಿರಲು

ಸಂಟ ಹೇಳಿದ: ನೋಡು ಒಂದು ಹಗ್ಗ ತೊಗೊಂಡು ಹೋಗಕ್ಕೆ ಎರಡು ಟ್ರಕ್ ಬೇಕಾ?

ಹುಡುಗ: ತೆಂಗಿನ ಮರ ಹತ್ತಿದರೆ ಇಂಜಿನಿಯರಿಂಗ್ ಕಾಲೇಜ್ ಹುಡುಗೀರು ಕಾಣ್ತಾರೆ

ಹುಡುಗಿ: ಅಲ್ಲಿಂದ ಬಿದ್ರೆ ಮೆಡಿಕಲ್ ಕಾಲೇಜ್ ಹುಡುಗೀರೂ ಕಾಣ್ತಾರೆ

ಮತ್ತಷ್ಟು ಹಾಸ್ಯಕ್ಕೆ ಭೇಟಿ ಕೊಡಿ – ಸುಗಮ ಕನ್ನಡ ಕೂಟ

ಜಾಣ ಕರ್ನಾಟಕ

೧. ಪ್ರಸಿದ್ಧ ಗಿರಿಧಾಮ ನಂದಿ ಬೆಟ್ಟದ ಸಾಲಿನಲ್ಲಿರುವ ಇನ್ನೂ ನಾಲ್ಕು ಬೆಟ್ಟಗಳನ್ನು ಹೆಸರಿಸ ಬಲ್ಲಿರಾ?

೨. ಏಷ್ಯಾ ಖಂಡದ ಅತಿ ದೊಡ್ಡ ಏಕಶಿಲಾ ಬೆಟ್ಟ ಎಂಬ ಹೆಗ್ಗಳಿಕೆಗೆ ಪಾತ್ರವಾಗಿರುವ, ಬೆಂಗಳೂರಿನ ಸಮೀಪದ ಬೆಟ್ಟ ಯಾವುದು?

ಸರಿ ಉತ್ತರಕ್ಕೆ ಪುಟ ೧೮ ನೋಡಿ

ಇದೇನ್ಲಾ ಇದು – ಉತ್ತರ

೧. ಬೀಸುವ ಕಲ್ಲು

೨. ತಾಳಿ (ಮಾಂಗಲ್ಯ)

ಸಹನೆ

ಲೇಖಕರು: ಸ್ಮಿತಾ ಮೇಲ್ಕೋಟೆ

ಸುಕ್ಕು ಚರ್ಮದ ಸೊರಗಿ ಬತ್ತಿದ್ದ ಅಮ್ಮನ ಕಣ್ಣುಗಳನ್ನೇ ದಿಟ್ಟಿಸುತ್ತಾ ಸುನೀಲ ಹೇಳಿದ. ಹೇಳು ಅಮ್ಮ, ಈ ಚಿತ್ರ ಪಟವನ್ನು ಎಲ್ಲಿ ತೂಗು ಹಾಕೋಣ? ತಕ್ಷಣವೇ ಅಮ್ಮನ ಕಣ್ಣಲ್ಲಿ ಹೊಳಪು. ಅದೋ ನೋಡು ಉಯ್ಯಾಲೆಯ ರೂಮಿನಲ್ಲಿ ಬಾಗಿಲ ಮೇಲಿನ ಮಧ್ಯ ಭಾಗಕ್ಕೆ ಎಲ್ಲರಿಗೂ ಕಾಣುವ ಹಾಗೆ ಹಾಕು. ಅಮ್ಮನ ಮಾತು ಅಂದರೆ ಮುಖ ಸಿಂಡರಿಸುತಿದ್ದ ಸುನೀಲ ಹಾಗೆ ಕಣ್ಣು ಮುಚ್ಚಿ ನೆನಪಿನ ಲೋಕದಲ್ಲಿ ತೇಲಿ ಹೋದ.

ಸುನೀಲ, ಸುಶೀಲಮ್ಮನ ಒಬ್ಬನೇ ಮಗ. ಮಗನ ಮೇಲೆ ಬಹಳ ಅಕ್ಕಾರಾಸ್ತೆ. ಅವನಿಗೆ ಬೇಕಾದ ಉಡುಗೆ, ತೊಡುಗೆ, ಇಷ್ಟವಾದ ತಿಂಡಿ ತೀರ್ಥ ಮಾಡಿ ಬಡಿಸುವುದು, ಅವನ ಎಲ್ಲಾ ಬೇಕು ಬೇಡಗಳನ್ನು ಗಮನಿಸುತ್ತಾ ಕೊಂಚ ಹೆಚ್ಚಾಗಿಯೇ ಅವನನ್ನು ಹಚ್ಚಿಕೊಂಡಿದ್ದಳು. ಸುಶೀಲಮ್ಮ ಮನೆ ಕೆಲಸದಲ್ಲಿ ಬಹಳ ಅಚ್ಚುಕಟ್ಟು, ಸ್ವಚ್ಛತೆಗೆ ಜಾಸ್ತಿ ತಲೆ ಕೆಡಿಸಿಕೊಳ್ಳುವ ಹೆಂಗಸು. ಎಲ್ಲಾ ವಸ್ತು ಅದರ ಜಾಗದಲ್ಲೇ ಇರಬೇಕು. ವಸ್ತುಗಳು ಸ್ಥಾನ ಪಲ್ಲಟವಾದಲ್ಲಿ ದೊಡ್ಡ ರಂಪ ಮಾಡುವುದು. ಸೋಫಾ ಮೇಲಿರುವ ಹೊದಿಗೆ, ದಿಂಬುಗಳು ಕೂಡ ಜಾಗ ಕದಲಿಸಿರಬಾರದು. ಅಡಿಗೆ ಮನೆಯ ಸಾಮಾನುಗಳು ಒಂದೂ ಜಾಗ ಬದಲಿಸಬಾರದು.

ಬೆಳಿಗ್ಗೆಯಿಂದ ಸಾಯಂಕಾಲವರೆಗೂ ಸುಶೀಲಮ್ಮನ ಮನೆ ಒಪ್ಪ ಓರಣವಾಗಿಡುವುದರಲ್ಲಿಯೇ ಕಳೆಯುತಿತ್ತು. ಸಾಯಂಕಾಲ ಆದೊಡನೆ ಮಗನ ಆಗಮನಕ್ಕೆ ಕಾಯುತಿದ್ದಳು. ಸುನೀಲ ಬಂದೊಡನೇ ಆಫೀಸಿನ ಬ್ಯಾಗ್ ಸೋಫಾನಲ್ಲಿ ಒಗೆದು, ಶೂಸ್ ಅಲ್ಲಿಯೇ ಬಿಚ್ಚಿ ಸುಸ್ತಾಗಿ ಸೋಫಾ ಮೇಲೆ ಒರಗಿ ಅಮ್ಮ ಬೇಗ ಬಿಸಿ ಕಾಫಿ ತಂದು ಕೊಡು ಎಂದು ಕೂಗಿದಾಗ, ಬೇಗ ಬೇಗ ಸುಶೀಲ ಕಾಫಿ ಕಪ್ ಹಿಡಿದು ಮಗನ ಬಳಿ ಬಂದು, ಭೂಕಂಪ ಆಗಿ ತನ್ನ ಮನೆಯ ಚಿತ್ರಣವೇ ಬೇರೆ ಆಗಿರುವಂತೆ, ಜೋರಾಗಿ ಕೂಗಾಡಲು ಶುರು ಮಾಡಿದಳು, ಮಗನ ಮೇಲೆ ಬೈಗಳುಗಳ ಸುರಿಮಳೆಯನ್ನೇ ಸುರಿಸಿದಳು. ನನ್ನ ಮನೆಯಲ್ಲಾ ಹಾಳು ಮಾಡಿದ ಮಗ ನೀನು. ಎಂದು ಕಂಪಿಸುತ್ತಾ ಕಾಫಿ ಲೋಟ ಕೆಳಗೆ ಚೆಲ್ಲಿ ಬಿಟ್ಟಳು. ಸುನೀಲನು ಅಮ್ಮ ಅನಿಸಿಕೊಂಡು ಒಂದು ಸಹನೆ ಬೇಡವೇ? ಮಗನನ್ನೇ ಹೀಗೆ ಶತ್ರುವಾಗಿ ನೋಡುವುದೇ ಎಂದು ಕಿರಿಚಿದ.

ಅಮ್ಮನ ಈ ವರ್ತನೆ ಮಗನಿಗೆ ಅಸಹನೆ ತಂದಿತ್ತು. ಅಮ್ಮನ ಮಾತನ್ನು ಕೇಳಬಾರದು ಇನ್ನು ಮುಂದೆ ಎಂಬ ರೋಷ ಬಂದು ಮನೆಯಿಂದ ಹೊರ ನಡೆದ. ಮತ್ತೆ ಸಂಜೆ ಬರುವ ಹೊತ್ತಿಗೆ ಮತ್ತೆ ಮನೆಯ ಒಪ್ಪ ಓರಣ ವಾಪಸ್ಸಾಗಿತ್ತು. ಅಮ್ಮನ ಸಹನೆ ಕೂಡ ಸಹಜ ಸ್ಥಿತಿಗೆ ಮರಳಿತ್ತು. ಏನೂ ಆಗಿಲ್ಲವೆಂಬ ರೀತಿ ಅಮ್ಮ ಕೂತು ಅಡಿಗೆ ಬಡಿಸಿದಳು. ಮಗನ ಕೋಪ ಇನ್ನೂ ಇಳಿದಿರಲಿಲ್ಲ. ಮೌನವಾಗಿ ಊಟ ಮಾಡಿ ಎದ್ದು ಮಲಗಲು ಹೊದ. ಮಂಚದ ಮೇಲೆ ಕಣ್ಣು ಮುಚ್ಚಿದೊಡನೆ ಮತ್ತೆ ಅಮ್ಮನ ರೌದ್ರಾವತಾರ ನೆನಪಿಗೆ ಬರುತಿತ್ತು. ಅಪ್ಪನ ಬಳಿ ಹೇಳೋಣವೆಂದರೆ, ಬಿಸಿನೆಸ್ ಎಂದು ಊರು ಊರು ತಿರುಗತ್ತಾ ಇರುತ್ತಾರೆ. ಮನೆಯಲ್ಲಿದ್ದಗಲೂ ಅಮ್ಮನ ಮಾತಿಗೆ ಎದುರು ಆಡುವುದಿಲ್ಲ, ಅಮ್ಮ ಮಾಡುವ ಕಿರಿ ಕಿರಿ ಅಪ್ಪನಿಗೆ ರೋಸಿ ಹೋಗಿದೆಯೋ. ಅದಕ್ಕೆ ಬೇರೆ ಊರಿನಲ್ಲಿ ಬಹಳ ಸಮಯ ಕಳೆಯುತ್ತಾರೋ ಏನೋ ಎಂಬ ಏನೇನೋ ಯೋಚನೆಯಲ್ಲೇ ನಿದ್ದೆ ಹತ್ತಿತು.

ದಿನ ನಿತ್ಯದ ಅಮ್ಮನ ಜೊತೆ ಜಗಳಗಳಿಂದ ಬಹಳ ದಿನದಿಂದ ತಾನು ಮದುವೆಯಾಗುವ ಹುಡುಗಿಯ ಬಗ್ಗೆ ಹೇಳೇ ಇರಲಿಲ್ಲ. ಅಮ್ಮ ಇದ್ದಕ್ಕೆ ಹೇಗೆ ಪ್ರತಿಕ್ರಿಯೆ ತೋರಿಸುತ್ತಾಳೋ ಎಂದು ನಿಧಾನ ಮಾಡುತಿದ್ದ. ತಿಂಡಿ ಬಡಿಸಿ ಸುಶೀಲಮ್ಮ, ಸುನೀಲ ನಿನಗೆ ಮದುವೆ ವಯಸ್ಸಾಯಿತಲ್ಲೊ, ನೋಡು ನನ್ನ ಗೆಳತಿ ಬಂದು ಜಾತಕ ಕೊಟ್ಟು ಹೋಗಿದ್ದಾಳೆ ಎಂದಳು. ಅಮ್ಮ ನಾನೊಂದು ವಿಷಯ ಹೇಳಲೋ ಬೇಡವೋ ನಿನಗೆ ಎಂದ ಸಣ್ಣ ಧ್ವನಿಯಲ್ಲಿ. ಸುಶೀಲಮ್ಮ ಹೇಳಪ್ಪ ಹೇಳು ನಿನ್ನ ಆಫೀಸಿನಲ್ಲಿ ಕೆಲಸ ಮಾಡುವ ಹುಡುಗಿ ತಾನೇ ಎಂದಳು ಎಲ್ಲಾ ಗೊತ್ತಿರುವ ಹಾಗೆ. ಸುನೀಲ ಆಶ್ಚರ್ಯದಿಂದ ಅಮ್ಮ ನಿನಗೆ ಹೇಗೆ. ಎಂದು ಬಾಯಿ ತೆಗೆದಾಗ. ನಿನ್ನ ರೂಮ್ನಲ್ಲಿ ಒಂದು ವಸ್ತುವೂ ನೆಟ್ಟಗಿರಲಿಲ್ಲ. ಆಗ ಸಿಕ್ಕ ಫೋಟೋ ನೋಡಿ ಗೊತ್ತಾಯಿತು.

ಇದು ನಡೆದ ಒಂದೆರಡು ತಿಂಗಳಿಗೆ ಸುಶೀಲಮ್ಮನ ಸೊಸೆ ಬಂದಾಯಿತು. ಸುನೀಲ ಹೆಂಡತಿಗೆ ಅಮ್ಮನ ಕೋಪದ ವಿಷಯ ಹೇಳಿರಲಿಲ್ಲ. ಯಥಾ ಪ್ರಕಾರ ಇಟ್ಟ ಸಾಮಾನುಗಳು ಸಿಗದಿದ್ದಾಗ, ಅಮ್ಮ ಮಗನ ಕೋಪ ತಾಪ ಸ್ವಲ್ಪ ತಾರಕ ಸ್ವರ ಮುಟ್ಟಿತು. ಸುನೀಲನಿಗೆ ಹೆಂಡತಿ ಎದುರು ಆದ ಅವಮಾನ ತಡೆಯಲಾಗಲಿಲ್ಲ. ಹೆಂಡತಿಗೆ ಹೇಳಿದ ಇನ್ನು ಈ ಮನೆಯಲ್ಲಿ ನನಗೆ ಇರುವುದಕ್ಕೆ ಆಗುವುದಿಲ್ಲ. ನಡೆ ಬೇರೆ ಹೋಗೋಣ ಎಂದು. ಹೆಂಡತಿ ಸಮಾಧಾನವಾಗಿ. ಇವತ್ತು ನಿಮಗೋಸ್ಕರ ಸಿನಿಮಾ ಟಿಕೆಟ್ ಖರೀದಿಸಿದ್ದೆ ಹೋಗೋಣವೆ ಎಂದಳು. ಸರಿ ನಡಿ ಈ ರಂಪಾಟ ದಿಂದ ಮುಕ್ತಿ ಸಿಕ್ಕರೆ ಸಾಕು ಎಂದು ಹೊರಟ.

ಗಂಡ ಹೆಂಡತಿ ಇಂಗ್ಲಿಶ್ ಸಿನಿಮಾ “As Good As it Gets” ನೋಡಿ ಮನೆಗೆ ಬರಲು ಆಟೋ ಹಿಡಿದರು. ಸುನೀಲನ ಹೆಂಡತಿ ನಿಧಾನವಾಗಿ ಗಂಡನ ಕೈ ಹಿಡಿದು ಸಿನಿಮಾ ಹೇಗಿತ್ತು? ಎಂದು ಕೇಳಿದಳು. ಸುನೀಲ. ಅಬ್ಬ ನನ್ನ ಮೂಡ್ ಬದಲಾಯಿಸಿತು ನೋಡು ಎಂದನು. ನಿಮಗೆ ಅತ್ತೆ ವರ್ತನೆ ಸಿನಿಮಾದಲ್ಲಿ ಬರುವ ಹೀರೋ ವರ್ತನೆ ಒಂದೇ ಅನಿಸಲಿಲ್ಲವೇ? ಸುನೀಲ ಹೆಂಡತಿ ಏನು ಹೇಳುತ್ತಿದ್ದಾಳೆ ಎಂದು ಅವಳ ಮುಖವೇ ನೋಡತೊಡಗಿದ. ಅವಳು ನಿಧಾನವಾಗಿ. ಅತ್ತೆ ಕೋಪ ತಾಪ, ಎಲ್ಲ ಸಹಜ. ಅದನ್ನು “Obsessive compulsory disorder” ಎಂದು ಕರೆಯುತ್ತಾರೆ. ಇದೊಂದು ಮಾನಸಿಕ ಅಸ್ವಸ್ಥತೆ. ಹೀಗಿರಬೇಕಾದರೆ ಅವರ ಮೇಲೆ ನೀವು ಇನ್ನೂ ರೇಗಾಡುವುದೇ. ಅವರ ಜೀವನಕ್ಕೆ ನಾವು ಹೊಂದಿಕೊಳ್ಳ ಬೇಡವೇ. ಜ್ವರ, ಕೆಮ್ಮು ಬಂದಾಗ ಎಷ್ಟು ದೇಹಕ್ಕೆ ಹಿಂಸೆ ಆಗುತ್ತದೆಯೋ ಹಾಗೆಯೇ ಮಾನಸಿಕ ಕಾಯಿಲೆಗಳು ಮನಸ್ಸನ್ನು ಭಾದಿಸುತ್ತವೆ. ಅವರ ಸುತ್ತ ಮುತ್ತ ಇರುವವರು ಅದನ್ನು ಅರ್ಥ ಮಾಡಿಕೊಂಡು ಅವರ ಶುಶ್ರೂಷೆ ಮಾಡಬೇಕು. ಬೇರೆ ಮನೆ ಅಂತ ಮಾತೆತ್ತಬೇಡಿ.

ಸುನೀಲ ನಾನು ಹೇಳಿದ್ದು ಕೇಳಲಿಲ್ಲವೇನೋ, ರೂಂ ಬಾಗಿಲ ಮಧ್ಯ ಭಾಗದಲ್ಲಿ ಫೋಟೋ ಹಾಕೋ ಚೆನ್ನಾಗಿ ಕಾಣುತ್ತೆ ಎಂದು ಅಮ್ಮ ಜೋರಾಗಿ ಕರೆದಾಗ, ಸುನೀಲ ತನ್ನ ನೆನಪಿನ ವಿಮಾನ ಇಳಿದು “ಅಮ್ಮ ಇಗೋ ಹಾಕಿದೆ ನೋಡು ಎಂದು ನಕ್ಕ” !!! ▪

ಪದ-ಪುಂಜ (ಶಾನೆ ತಲೆ ಕೆಡಿಸ್ಕೋಬೇಡಿ)

ಕೆಳಕಂಡ ಐದು ಪದ/ವಾಕ್ಯಕ್ಕೆ ಅರ್ಥಬರುವಂತೆ ಬಿಟ್ಟ ಜಾಗ ತುಂಬುವ ಹಾಗೆ ಉತ್ತರ ಹುಡುಕಿ

ಸುಳಿವು: ಈ ಸಂಚಿಕೆಯ ಪದಪುಂಜದ ಎಲ್ಲಾ ಉತ್ತರಗಳು ಚಲನಚಿತ್ರಗಳ ಹೆಸರುಗಳು

1. ಕಡಲ ಚಿಪ್ಪಿನೊಳಗಿನ ಮಣಿಯಂಥಹ ಅಣ್ಣನ ಹೆಂಡತಿ

	ತ್ತಿ			ಅ		

2. ಪ್ರಿಯತಮೆಯ ಸಮೇತ ಮಾಲಿನಲ್ಲಿ ಗೋಪಾಲನಾಗಿ ಅನಂತನಾಗ್ ಮಾಡಿದ್ದೇನು?

	ಲ್		ಲ್		ಧ		

3. ಗೋಲ್ಡನ್ ಸ್ಟಾರ್ ಗಣೇಶನ ಚಿತ್ರದಲ್ಲಿ ಎರಡು ನದಿಗಳ ಮಿಲನವಾದೀತೆ?

	ಗ	

4. ರೂಪಿಣಿಯೊಡನೆ ಅಂಬರೀಷ್ ತುಳಿದ ಹೆಜ್ಜೆಗಳು

			ದಿ

5. ಚೋಮನಡುಡಿಯನ್ನು ಬಾರಿಸಿ ರಾಷ್ಟ್ರಪ್ರಶಸ್ತಿ ಪಡೆದವರು ಯಾವ ರಾಯರು?

	ಸು			ರಾ	

ಮೇಲಿನ ಆಯ್ದ ಅಕ್ಷರಗಳನ್ನು ಸೇರಿಸಿ ಕೆಳಗಿನ ವಾಕ್ಯಕ್ಕೆ ಅರ್ಥ ಕೊಡುವ ಉತ್ತರ ಹುಡುಕಿ

ಉತ್ತರ - ಬಜಾರಿ ಮಂಙುಳಾ ತಂದೆಗೆ ಪುಂಡ ರಾಜ್ ಹೇಳಿದ್ದು ಹೀಗೆ

ನಿಮ್ಮ ಉತ್ತರ ಈಮೈಲ್ ಮಾಡಿ, (horanadachilume@gmail.com)

ಫೆಬ್ರವರಿ 25 ತಮ್ಮ ಉತ್ತರ ಕಳುಹಿಸಲು ಕಡೆಯ ದಿನಾಂಕ.

ಜನವರಿ ಪದ ಪುಂಜ – ಉತ್ತರ

ಕಳೆದ ತಿಂಗಳ ಪದ ಪುಂಜಕ್ಕೆ ಉತ್ತರಿಸಿದ ಅನೇಕ ಜನರಿಗೆ ನಮ್ಮ ಧನ್ಯವಾದಗಳು. ಅವರ ಪೈಕಿ ಎಲ್ಲಾ ಸರಿ ಉತ್ತರ ಕಳುಹಿಸಿರುವ ಇವರಿಗೆ ನಮ್ಮ ಅಭಿನಂದನೆಗಳು.

- ಸುಮ ಅಶೋಕ್, ಸಿದ್ನಿ
- ರಾಘವೇಂದ್ರ ಮೂರ್ತಿ, ಬೆಂಗಳೂರು
- ಮಧು ಭಾರದ್ವಾಜ್, ಬೆಂಗಳೂರು
- ನಾಗಶೈಲ ಕುಮಾರ್, ಸಿದ್ನಿ
- ಜಯಶ್ರೀ, ಸಿದ್ನಿ
- ರೇಖಾ, ಸಿದ್ನಿ
- ಗೀತ ಪ್ರಸಾದ್, ಅಡಿಲೇಡ್

ಉತ್ತರಗಳು:

೧. ಕನಕಾಂಬರ ೨. ಕ್ಷಮಿಸು

೩. ದಾಸವಾಳ ೪. ಪರಿಮಳ ೫. ಪ್ರೇತ

ಪರಿಸರ ಪ್ರೇಮಿ

ಜನವರಿ ತಿಂಗಳ ಪದಪುಂಜ

ಕೆಳಕಂಡ ಐದು ಪದ/ವಾಕ್ಯಕ್ಕೆ ಅರ್ಥಬರುವಂತೆ ಬಿಟ್ಟ ಜಾಗ ತುಂಬುವ ಹಾಗೆ ಉತ್ತರ ಹುಡುಕಿ

1.ಸಂಜೆಯ ನೇಸರನ ಬಣ್ಣದ ಪುಷ್ಪ ನಾನು

2. ಮನ್ಮಿಸು

3. ಔಷಧಿಯ ಗುಣವುಳ್ಳ ಹೂ

4. ಹೂದೋಟ ಫಂ ಎಂದಿದೆ

5. ನಿಶಾಚರ - ಇದನ್ನು ಭೂತ, ಪಿಶಾಚಿ ಎಂದೂ ಕರೆಯುತ್ತಾರೆ

ಮೇಲಿನ ಆಯ್ದ ಅಕ್ಷರಗಳನ್ನು ಸೇರಿಸಿ ಕೆಳಗಿನ ವಾಕ್ಯಕ್ಕೆ ಅರ್ಥ ಕೊಡುವ ಉತ್ತರ ಹುಡುಕಿ

ಉತ್ತರ - ನಿಸರ್ಗವನ್ನು ಪ್ರೀತಿಸುವವ (ಒಂದಕ್ಕಿಂತ ಹೆಚ್ಚು ಪದಗಳು ಇರಬಹುದು)

Educational, Legal, financial, Health,
Reality management services
Liaison work, Tours & Travels
visit www.nriseva.in or contact
Singapore – Harish +6598691760
Canada – SowmyaKeshava – 00968-99226928
Australia – Nagendra A- 0061401193852
NRI SEVA
Contact Mr. Nagendra EMAIL
0401193852

ರಂಗೋಲಿ ಬುಕ್

ನಿಮ್ಮ ರಂಗೋಲಿ ಇಲ್ಲಿ ಕಾಣಬೇಕೇ? ಇ-ಮೇಲ್ ಮಾಡಿ: horanadachilume@gmail.com

ಮತ್ತಷ್ಟು ರಂಗುರಂಗಿನ ರಂಗೋಲಿ ಮುಂದಿನ ಸಂಚಿಕೆಯಲ್ಲಿ

ರಂಗವಲ್ಲಿ

ಭಾರತೀಯ ಸಂಸ್ಕೃತಿಯಲ್ಲಿ, ನಿಯಮ ಪ್ರಕಾರ ಮಾಡುವ ಅನೇಕ ಕಾರ್ಯಗಳಲ್ಲಿ ರಂಗೋಲಿ ಬಿಡಿಸುವುದೂ ಒಂದು. ಸಾಮಾನ್ಯವಾಗಿ ಮನೆಯ ಹೆಣ್ಣು ಮಕ್ಕಳು ತಮ್ಮ ದೈನಂದಿನ ಚಟುವಟಿಕೆಯ ಒಂದು ಅಂಗವಾಗಿ ರಂಗೋಲಿ ಹಾಕುವುದನ್ನು ರೂಡಿಸಿಕೊಂಡಿರುತ್ತಾರೆ. ಮನೆಯ ಮುಂದೆ ರಂಗೋಲಿ ಇದ್ದರೆ ಅದೆಷ್ಟು ಲಕ್ಷಣ!

ಕೇವಲ ಸಂಸ್ಕೃತಿ ಅಷ್ಟೇ ಅಲ್ಲದೆ, ರಂಗೋಲಿ ಬಿಡಿಸುವುದರಿಂದ, ರೇಖಾ ಗಣಿತ ಉತ್ತಮಪಡಿಸಿಕೊಳ್ಳುವಲ್ಲಿ ಸಹಕಾರಿ. ಅದೆಷ್ಟು ಚುಕ್ಕಿಗಳು, ಎಂತೆಂತಹ ರೇಖೆಗಳು, ತರಹಾವರಿ ನಮೂನೆಗಳು. ಅಬ್ಬ! ರಂಗೋಲಿ ನಿಮಗೆ ಬೆರಗು ಮಾಡಿಲ್ಲವೇ? ಒಮ್ಮೆ ರಂಗೋಲಿಯಲ್ಲಿ ಕೈ ಆಡಿಸಿ ನೋಡಿ, ಒಂದು ಕಾವ್ಯವೇ ಹುಟ್ಟೀತು ... ▪



ರಚನೆ: ಪುಷ್ಪ ವೆಂಕಟೇಶ್

ನೆನಪಿನ ಪಯಣ - ಸೈಕಲ್ ಯಾತ್ರೆ - ೩

ಲೇಖಕರು: ನಾಗಶೈಲ ಕುಮಾರ್

ನಾಗಶೈಲ ಕುಮಾರ್ ಭಾರತದಲ್ಲಿ ಕೈಗೊಂಡಿದ್ದ "ಸೈಕಲ್ ಪಯಣ" ದ ಅನುಭವ ಲೇಖನದ ಮುಂದಿನ ಕಂತು ...

ಮಂಜಿನಂತೆ ಮಾಯ: ಮುರಿದಿದ್ದ ಸೈಕಲ್ಲನ್ನು ತಳ್ಳಿಕೊಂಡು, ತಲೆಯ ತುಂಬಾ ಮುಂದೇನಪ್ಪ ಮಾಡುವುದು ಎಂಬ ಯೋಚನೆ ತುಂಬಿಕೊಂಡು ದತಿಯಾ ಎಂಬ ಊರಿನೆಡೆ ಸಾಗಿದೆವು. ಸುಮಾರಾಗಿ ದೊಡ್ಡದಾಗೇ ಇದ್ದ ಊರಿನಲ್ಲಿ ಸಿಕ್ಕಿದ್ದು ಒಂದೇ ಒಂದು ಸಣ್ಣ ಸೈಕಲ್ ಶಾಪ್. ಆದರೆ ಆ ಅಂಗಡಿಯವನು ತೋರಿದ ಆಸಕ್ತಿ, ಬುದ್ಧಿವಂತಿಕೆ ಮಾತ್ರ ಆಶ್ಚರ್ಯಕರವಾಗಿತ್ತು. ಒಂದೈದು ನಿಮಿಷದಲ್ಲಿ ಸೈಕಲ್ ಫ್ರೇಮ್ ನ ಒಳಗೆ ತೂರುವಂತಹ ಕಬ್ಬಿಣದ ಕಂಬಿ ಒಂದನ್ನು, ತುಂಡಾಗಿರುವ ಫ್ರೇಮ್ ನ ಎರಡೂ ಬದಿಯ ಟ್ಯೂಬ್ ಗಳ ಒಳಗೆ ಸೇರಿಸಿ, ಮೊದಲಿನ ಹಾಗೇ ಕಾಣುವಂತೆ ಕೂಡಿಸಿದರು. ನಂತರ ಹಗುರವಾಗಿ ಬೆಸಗೆ ಹಾಕಿ, ನಿಮ್ಮ ಸೈಕಲ್ ಸಿದ್ದ ಎಂದರು. ಸುಮಾರು ಮುನ್ನೂರು- ನಾಲ್ಕುನೂರು ರೂಪಾಯಿಗಳ ಖರ್ಚನ್ನು ಎದುರು ನೋಡುತ್ತಿದ್ದ ನಮಗೆ ಏಳು ರೂಪಾಯಿ ಕೊಡಿ ಎಂದಾಗ ಆದ ಆಶ್ಚರ್ಯ ಅಷ್ಟಿಷ್ಟಲ್ಲ. ಅವನಿಗೆ ಮನಸಾರೆ ಧನ್ಯವಾದ ತಿಳಿಸಿ ಮುಂದೆ ನಡೆದೆವು. ಮತ್ತೆ ಬೆಂಗಳೂರಿಗೆ ಹಿಂತಿರುಗುವವರೆಗೂ, ಗಾಡಿ ಗಟ್ಟಿಮುಟ್ಟಾಗಿತ್ತು.

ರಣಹದ್ದುಗಳಿಗೆ ಹೆದರಿ: ಸೈಕಲ್ ಸರಿಹೋದ ಸಂತೋಷದಲ್ಲಿ ಇಮ್ಮಡಿ ಉತ್ಸಾಹದಿಂದ ಮುಂದೆ ಸಾಗಿದೆವು. ಆ ಊರಿನಾಚೆಗೆ ಇದ್ದ ಪುರಾತನ ಮಹಲ್ಲನ್ನು ನೋಡಬೇಕೆಂದು ಅತ್ಯುತ್ಸಾಹದಿಂದ ಬಾಗಿಲ ಬಳಿ ಕುಳಿತಿದ್ದ ಕಾವಲುಗಾರನಿಗೆ ಐದು ರೂಪಾಯಿ ನೀಡಿ ಒಳ ನಡೆದೆವು. ಅವನು ದುಡ್ಡು ಕಿಸೆಗಿರಿಸಿ, ಗೊರಕೆ ಹೊಡೆಯುತ್ತಾ ಮಲಗಿದ, ಹೇಗಿದ್ದರೂ ಹಾಳು ಬಿದ್ದ ಅರಮನೆ ತಾನೆ, ಹೊತ್ತುಕೊಂಡು ಹೋಗಲು ಏನಿದ್ದೀತು. ಒಳಗೆ ಹೋದಂತೆಲ್ಲಾ ಯಾವುದೋ ಪುರಾತನ ಲೋಕಕ್ಕೆ ಹೋದಂತ ಅನುಭವ. ಗವ್ವೆನ್ನುವ ಸಣ್ಣ ಸಣ್ಣ ಕತ್ತಲ ಕೋಣೆಗಳು. ಬಣ್ಣ ಕಳೆದುಕೊಂಡು ಕಮಟು ವಾಸನೆ ಬೀರುವ ಹಜಾರ, ಉಗ್ರಾಣ, ಅಡಿಗೆ ಕೋಣೆಗಳು. ಅಲ್ಲಿನ ನಿಶ್ಯಬ್ಧ ವಾತಾವರಣವೇ ಹೆದರಿಕೆ ಮೂಡಿಸುವಂತಿತ್ತು. ಇಬ್ಬರೂ ಕೈ ಕೈ ಹಿಡಿದುಕೊಂಡು ತಡವರಿಸುತ್ತಾ ನಾಲ್ಕೈದು ಮಹಡಿಗಳನ್ನು ಹತ್ತಿ ಮೇಲೆ ಬಂದಾಗ, ತೆರೆದ ತಾರಸಿಯಲ್ಲಿ ಮಧ್ಯಾನ್ಹದ ಬಿಸಿಲು ಹಾಯೆನಿಸುವ ಗಾಳಿ, ಮತ್ತೆ ಧಾರಾಳವಾಗಿ ಉಸಿರಾಡುವಂತಾಯಿತು. ನಮ್ಮಿಬ್ಬರಿಗೂ ಭೂತ ಪ್ರೇತಗಳ ಭಯವಿಲ್ಲ, ಆದರೆ ಎಲ್ಲಿ ಯಾರು ಅಡಗಿರುತ್ತಾರೋ ಎಂಬ ಅನುಮಾನವಿತ್ತು. ಅದೇನೂ ಇಲ್ಲದೆ ಮೇಲೆ ಬಂದರೆ, ನಾವು ಊಹಿಸಿರದ ರೀತಿಯಲ್ಲಿ ಗಂಡಾಂತರ ಕಾದಿತ್ತು. ಹಲವಾರು ಬೃಹದಾಕಾರದ ಹದ್ದುಗಳು, ಇದು ನಮ್ಮ ರಾಜ್ಯ ಇಲ್ಲಿ ನಿಮಗೆ ಪ್ರವೇಶವಿಲ್ಲ ಎಂಬಂತೆ ಕಾವಲು ಕೂತಿದ್ದವು. ಹೆದರಿಕೆಯಾದರೂ ನಾವು ಭಂಡ ದೈರ್ಯದಿಂದ ಕಳ್ಳರಂತೆ ಹೆಜ್ಜೆ ಇಡುತ್ತಾ, ಸುತ್ತಲಿನ ದೃಶ್ಯವನ್ನು ಕಣ್ಣು, ಕ್ಯಾಮೆರಾಗಳಲ್ಲಿ ತುಂಬಿಕೊಂಡು, ಕೆಳಗಿಳಿದು ಬಂದೆವು.

ಹೆದ್ದಾರಿಯ ಭೂತಗಳು: ಮಧ್ಯಪ್ರದೇಶ ದಾಟಿ ಉತ್ತರಪ್ರದೇಶವನ್ನು ಪ್ರವೇಶಿಸಿದ್ದೆವು. ಇದುವರೆಗಿನ ಪ್ರಯಾಣದಲ್ಲಿ ಘಾಟ್ ಸೆಕ್ಷನ್ ಗಳು, ಹಾಳಾದ ರಸ್ತೆಗಳು, ವಿಪರೀತ ಬಿಸಿಲು,ಮಳೆ ಎಲ್ಲವನ್ನೂ ಎದುರಿಸಿದ್ದೆವು. ಆದರೆ ಎಲ್ಲಕ್ಕಿಂತ ಭೀಕರವಾದ ಮತ್ತೊಂದು ಸಮಸ್ಯೆ ನಮ್ಮನ್ನು ಕಾಡತೊಡಗಿತ್ತು. ಈಗ ನಾವು ಸಾಗುತ್ತಿದ್ದುದು ರಾಷ್ಟ್ರೀಯ ಹೆದ್ದಾರಿ ಮೂರರಲ್ಲಿ. ನಾವು ಬಹುಶಃ ಅದರಲ್ಲಿ ಪ್ರಯಾಣ ಸುಖವಾಗಿರಬಹುದೆಂದು ಭಾವಿಸಿದ್ದೆವು. ಆದರೆ ಮುಂಬೈ, ಕಲ್ಕತ್ತಾ ನಡುವಿನ ಬೃಹತ್ತಾದ ಲಾರಿಗಳವರು, ನಮ್ಮನ್ನು ಗಣನೆಗೇ ತಾರದೆ, ನುಗ್ಗುತ್ತಿದ್ದರು. ಆಗ ಎಷ್ಟೇ ದೊಡ್ಡ ಹೆದ್ದಾರಿಯಾದರೂ ಎರಡು ಲಾರಿಗಳು ಹೋದರೆ ನಾವು ರಸ್ತೆಗಳ ಅಂಚಿನಲ್ಲಿ, ಬೀಳದಿರಲು ಸರ್ಕಸ್ ಮಾಡಬೇಕಾಗುತ್ತಿತ್ತು. ಎಲ್ಲೋ ಕೆಲವರು ನಮಗೆ ನಮಸ್ಕಾರ ಮಾಡಿ, ಹಾರೈಸಿ ಮುಂದೆ ಸಾಗುತ್ತಿದ್ದರು, ಕೆಲವರು ಲಾರಿಯ ಹಿಂಬಾಗ ಹಿಡಿದು ಕೊಂಡು ಬರಲು ಹೇಳಿ ನಮಗೆ ಸಹಾಯ ಮಾಡಲು ನೋಡುತ್ತಿದ್ದರು.

ಎಂದೂ ಮರೆಯದ ಹಾದಿ ...

ಆದರೆ ಹೆಚ್ಚಾಗಿ, ಬೇಕಂತಲೇ ನಮ್ಮೆಡೆಗೆ ಗಾಡಿಗಳನ್ನು ತಂದು ನಾವು ರಸ್ತೆ ಬಿಟ್ಟು ಕೆಳಗಿಳಿಯುವಂತೆ ಮಾಡಿ ಜೋರಾಗಿ ನಗುತ್ತಾ ಹೋಗುತ್ತಿದ್ದರು. ಕೆಲವೊಮ್ಮೆ ಮತ್ತೆ ರಸ್ತೆ ಮೇಲಕ್ಕೆ ಬರಲು ನಾವು ಹರ ಸಾಹಸ ಪಡಬೇಕಾಗುತ್ತಿತ್ತು. ಕೆಲವು ಕಡೆಯಂತೂ ರಸ್ತೆ ಬದಿಗೆ ಮರಳು ಹಾಕಿ, ನಮಗೆ ಸೈಕಲ್ ತಹಬಂದಿಗೆ ತರಲು ಬಹಳ ಕಷ್ಟವಾಗುತ್ತಿತ್ತು. ಉತ್ತರದಲ್ಲಂತೂ ರಸ್ತೆಗಳಲ್ಲಿ ಅಪಘಾತವಾಗಿ ಸತ್ತು ಬಿದ್ದಿರುತ್ತಿದ್ದ ಒಂಟೆ, ಮತ್ತು ಇತರ ಪ್ರಾಣಿಗಳಿಗೆ ಲೆಕ್ಕವಿರುತ್ತಿರಲಿಲ್ಲ. ರಸ್ತೆಯ ಮುಕ್ಕಾಲು ಭಾಗ ಆಕ್ರಮಿಸಿ ಲಾರಿಗಳು ಬಂದರೆ ಅವುಗಳು ನಮ್ಮನ್ನು ನುಂಗಲು ಬಂದಂತಿರುತ್ತಿತ್ತು. ಹಾಗಾಗಿ ನಾವು ಅವುಗಳಿಗೆ ಭೂತಗಳೆಂದೇ ಹೆಸರು ಕೊಟ್ಟೆವು.

ಮುಂದಿನ ಪುಟ ನೋಡಿ ...

ಚಳಿ ಚಳಿ ಎಂದರೆ ನಡುಕ: ಉತ್ತರ ಪ್ರದೇಶ ಪ್ರವೇಶಿಸುವವರೆವಿಗೂ ನಮಗೆ ಚಳಿಗಾಲದ ಅನುಭವ ಇನ್ನೂ ಆಗಿರಲಿಲ್ಲ.ಆದರೆ ಉತ್ತರಪ್ರದೇಶದಲ್ಲಿ ಮುಂದೆ ಮುಂದೆ ಸಾಗಿದಂತೆಲ್ಲಾ ಚಳಿ ಹೆಚ್ಚಾಗುತ್ತಾ ಹೋಯಿತು. ಬೆಳಗ್ಗೆ ಹೊತ್ತಿನಲ್ಲಿ ಹೊಟೆಲ್ ರೂಮ್ ಬಿಟ್ಟು ಹೊರಬರುವುದೇ ಕಷ್ಟವಾಗುತ್ತಿತ್ತು. ಮೈಯನ್ನು ಪೂರ್ತಿ ಪ್ಯಾಕ್ ಮಾಡಿಕೊಂಡು ಕೈಚೀಲ. ಕಾಲುಚೀಲ, ತಲೆಗೆ ಉಲ್ಲನ್ ಟೋಪಿ ಎಲ್ಲಾ ಹಾಕಿಕೊಂಡು ರಸ್ತೆಗೆ ಇಳಿಯುತ್ತಿದ್ದೆವು. ಇದರಿಂದಾಗ ನಮ್ಮ ವೇಗ ಕೂಡ ಕುಗ್ಗುತ್ತಿತ್ತು. ಹೆದ್ದಾರಿಗಳ ಬದಿಯಲ್ಲಿ ಲಾರಿಗಳ ಡ್ರೈವರ್ ಗಳು ಡಾಬಾಗಳ ಮುಂದೆ, ಮುಂಜಾವಿನಲ್ಲಿ ಬೆಂಕಿ ಹಾಕಿ ಒಟ್ಟಾಗಿ ಕುಳಿತು, ಬಿಸಿ ಕಾಯಿಸಿಕೊಳ್ಳುತ್ತಿದ್ದರು. ನಾವೂ ಅವರೊಡನೆ ಕುಳಿತು ಕಾಫಿ ಕುಡಿಯುತ್ತಾ ಬಿಸಿ ಕಾಯಿಸಿಕೊಳ್ಳುತ್ತಿದ್ದೆವು. ಚಳಿಯ ಪ್ರಭಾವ ಎಷ್ಟಿರುತ್ತಿತ್ತೆಂದರೆ, ಕೈ ಕಾಯಿಸಿಕೊಂಡಾಗ ಕೂದಲು ಸುಟ್ಟ ವಾಸನೆ ಬರುತ್ತಿತ್ತೇ ಹೊರತು, ಕೈ ಬಿಸಿಯಾಗುತ್ತಲೇ ಇರಲಿಲ್ಲ. ಹರಿದ್ವಾರದಲ್ಲಂತೂ ಗಂಗೆಯಲ್ಲಿ ಕೇವಲ ಒಂದೆರಡು ಕ್ಷಣವಷ್ಟೇ ನೀರಲ್ಲಿ, ಮುಳುಗಲು ಸಾಧ್ಯವಾದದ್ದು, ಅಷ್ಟಕ್ಕೇ ನನ್ನ ಕೈ ಬೆರಳುಗಳೆರಡು ಮರಗಟ್ಟಿ ಹೋಯಿತು. ಅಂದಂತೂ ನನ್ನಣ್ಣನೇ ನನಗೆ ಬಟ್ಟೆ ಹಾಕಿಕೊಳ್ಳಲು ಸಹಾಯ ಮಾಡಿದ. ಮತ್ತೆ ನಾನು ಬೆಂಗಳೂರಿಗೆ ಹಿಂದಿರುಗಿ ಚುಚ್ಚುಮದ್ದು ತೆಗೆದುಕೊಂಡ ಮೇಲೇ ಆ ಬೆರಳುಗಳು ಯಥಾ ಸ್ಥಿತಿಗೆ ಮರಳಿದ್ದು.

ಅನಿವಾರ್ಯ ಹಿಂದಿ ಪಾಠ: ನಮ್ಮಿಬ್ಬರಿಗೂ ಹಿಂದಿಯ ಅರಿವು ಅಷ್ಟಕ್ಕಷ್ಟೆ ಇತ್ತು. ಆದರೆ ಈಗ ಹಿಂದಿ ಮಾತನಾಡದೆ ಬೇರೆ ದಾರಿಯೇ ಇರಲಿಲ್ಲ. ಇದ್ದುದರಲ್ಲಿ ನಮ್ಮಣ್ಣ ನನಗಿಂತ ವಾಸಿ. ನಾವು ನಮ್ಮ ಪ್ರಯಾಣದುದ್ದಕ್ಕೂ ಮನೆಗೆ ಪತ್ರಗಳನ್ನು ಬರೆದು ಅಂಚೆಗೆ ಹಾಕುತ್ತಿದ್ದೆವು. ನಾವು ಬಳಸುತ್ತಿದ್ದುದು ಇನ್ ಲ್ಯಾಂಡ್ ಲೆಟರ್ ಗಳನ್ನು. ನಿಮಗೆ ಗೊತ್ತಲ್ಲ ಅದನ್ನು ಅಂಟಿಸಲು ಅದರಲ್ಲಿ ಅಂಟು ಎಷ್ಟು ಚೆನ್ನಾಗಿರುತ್ತದೆ ಎಂದು? ಕಡೆಗೆ ನಾವೇ ಒಂದು ಗೋಂದಿನ ಬಾಟಲ್ ತೆಗೆದಿಟ್ಟುಕೊಳ್ಳೋಣವೆಂದು ತೀರ್ಮಾನಿಸಿದೆವು. ಒಂದು ದಿನ ಬೆಳಗ್ಗೆ ಕಾಫಿ ಕುಡಿದ ನಂತರ ಪಕ್ಕದಲ್ಲೇ ಇದ್ದ ಜನರಲ್ ಸ್ಟೋರ್ ಗೆ ಹೋಗಿ ವ್ಯಾಪಾರ ಪ್ರಾಂಭಿಸಿದೆ,


ಝಾನ್ಸಿ ರಾಣಿ ಲಕ್ಷ್ಮೀಬಾಯಿ ಹೋರಾಡಿದ ಕೋಟೆ

ನಾನು: ಗಮ್ ಹೈ ಕ್ಯಾ?
ಅಂಗಡಿಯವ; ಗಮ್ ಕ್ಯಾ ಹೈ?
ನಾನು: ವೋ ಬಾಂದ್ ಕರ್ನೆಕೊ ಆತ ಹೈ ನಾ, ವೊ...
ಅಂಗಡಿಅಯವನು: ಬಾಂದ್ ಕ್ಯಾ ಹೈ?
ನಾನು: ಇನ್ ಲ್ಯಾಂಡ್ ಲೆಟರ್ ಬಾಂದ್ ಕರ್ ನಾ...
(ಕಾಗದ ಮಡಿಸಿ ಅಂಟಿಸುವ ಹಾಗೆ ಅಭಿನಯಿಸಿದೆ)
ಅಂಗಡಿಯವನು: ಠೀಕ್ ಹೈ ಮಾಲೂಮ್ ಹುವಾ
ಎಂದು ಹೇಳಿ ಇನ್ ಲ್ಯಾಂಡ್ ಲೆಟರ್ ಕೊಟ್ಟ!
ನಾನು ಮತ್ತೆ ವೊ ನಹಿ ಹೈ, ಎಂದು ಹೇಳಿ, ನನಗೆ ತಿಳಿದಿದ್ದ, ಪೇಸ್ಟ್, ಸ್ಟಿಕ್, ಗ್ಲೂ, ಎಂದೆಲ್ಲಾ ನನ್ನ ಭಾಷಾ ಜ್ಞಾನವನ್ನು ಅವನ ಬಳಿ ಪ್ರಯೋಗಿಸಿದೆ, ಪ್ರಯೋಜನವಾಗಲಿಲ್ಲ. ಹೀಗೆ ಕಾಲು ಗಂಟೆ ಕಳೆಯಿತು.
"ಅಷ್ಟೊತ್ತಿಗೆ ನನ್ನಣ್ಣ ಆಗಲಿಲ್ಲವೇನೋ ನಿನ್ನ ವ್ಯಾಪಾರ, ಏನು ಬೇಕಾಗಿತ್ತು?" ಎನ್ನುತ್ತಾ ಬಳಿಗೆ ಬಂದ.
"ನೋಡೋ ಇವನಿಗೆ ಗೋಂದು ಕೇಳಿದರೆ ಅರ್ಥವೇ ಆಗುತ್ತಿಲ್ಲ" ಎಂದೆ.
ಕೂಡಲೇ ಅಂಗಡಿಯವನು " ಗೋಂದ್? ಐಸಾ ಬೋಲೋ" ಎಂದು ಹೇಳಿ ಗೋಂದ್ ಬಾಟಲ್ ತೆಗೆದು ಕೊಟ್ಟ!!

ಕೋಟ್ ಪುತಲೀ ಎಂಬ ದೂರದ ರಾಜಾಸ್ಥಾನದ ಊರಿನಲ್ಲಿ ಸಂಜೆಯ ಸಮಯ ನನ್ನಣ್ಣ ರೇಡಿಯೊ ಹಾಕಿಕೊಂಡು ಸೈಕಲ್ ಗೆ ಪಂಕ್ಚರ್ ಹಾಕುತ್ತಿರುವಾಗ ಹಿಂದಿ ಸ್ವಲ್ಪ ಕಲಿತಿದ್ದರೆ ಚೆನ್ನಾಗಿರುತ್ತಿತ್ತು ಎಂದ, ನಾನು ತಮಾಷೆಗೆ, ಹೌದು ಈಗ ಯಾರಾದರೂ ಹೇಳಿಕೊಟ್ಟರೆ ಚೆನ್ನಾಗಿರುತ್ತದೆ ಎನ್ನುತ್ತಾ ರೇಡಿಯೋ ಕೇಂದ್ರಗಳನ್ನು ತಿರುಗಿಸುತ್ತಿದ್ದರೆ, " ಇದು ಆಕಾಶವಾಣಿ ಧಾರವಾಡ ಕೇಂದ್ರ, ಈಗ ಹಿಂದಿ ಪಾಠ" ಎಂದು ಪ್ರಸಾರ ತೇಲಿ ಬಂತು. ನಮಗಾದ ಆಶ್ಚರ್ಯ, ಆನಂದ ಅಷ್ಟಿಷ್ಟಲ್ಲ. ಮತ್ತೆ ಅದೇ ರಾತ್ರಿ ನಾವು ಉಳಿದುಕೊಂಡ ಹೋಟಲ್ ನಲ್ಲಿ ನಮಗೆ ಸಿಕ್ಕಿದ ಹೋಟಲ್ ಮ್ಯಾನೇಜರ್ ಕೂಡ ಬೆಂಗಳೂರಿನವರು.

ಕೂದಲು ಸುಟ್ಟರೂ ಬಿಸಿಯೇರದ ಚಳಿ

ಇಂದು ಸಂಜೆ ದೆಹಲಿಗೆ: ಅಂದು ಬೆಳಗ್ಗೆ ಶ್ರೀ ಕೃಷ್ಣನ ಜನ್ಮಭೂಮಿ ಮಥುರಾದಿಂದ ನಮ್ಮ ಪ್ರಯಾಣ ಆರಂಭವಾಗಿತ್ತು. ಹಿತಕರವಾದ ಹವೆ, ಸಮತಟ್ಟಾದ ಹೆದ್ದಾರಿ, ಗುರಿ ತಲುಪುವ ಉತ್ಸಾಹ, ನಮ್ಮಪ್ರಯಾಣದ ವೇಗವನ್ನು ವೃದ್ಧಿಸಿತ್ತು. ಹಿಂದಿನ ದಿನದಿಂದಲೇ ನಮಗೆ ಎಲ್ಲವೂ ಉಲ್ಲಾಸ ತರುವಂಥಹ ಘಟನೆಗಳು ಜರುಗುತ್ತಿದ್ದವು.ಸೊಗಸಾದ ಮಥುರೆಯ ದೇವಸ್ಥಾನ, ಮನೋಹರವಾದ ದೇವರ ಮೂರ್ತಿಗಳು ಎಲ್ಲವೂ ಮನಸ್ಸಿಗೆ ಮುದ ನೀಡಿತ್ತು. ಅದರೊಡನೆ ಮತ್ತೊಂದು ನೆಮ್ಮದಿ ನೀಡುವ ಘಟನೆ ಜರುಗಿತ್ತು. ನಾನು ನಮ್ಮ ಕ್ಯಾಮೆರಾವನ್ನು ದೇವಸ್ಥಾನದ ಭದ್ರತಾ ಕೊಠಡಿಯಲ್ಲಿ ಮರೆತು ರಾತ್ರಿ ರೂಮಿಗೆ ಹಿಂದಿರುಗಿಬಿಟ್ಟಿದ್ದೆ. ನಂತರ ಹುಡುಕಿಕೊಂಡು ದೇವಸ್ಥಾನಕ್ಕೆ ಹೋದರೆ, ಸಮಯವಾಯಿತೆಂದು ಎಲ್ಲೆಡೆ ಬೀಗ. ನಾವು ಮಾರನೇದಿನ ಬೆಳಗ್ಗೆ ೫ ಗಂಟೆಗೇ ದೆಹಲಿಗೆ ಹೊರಡುವುದಿತ್ತು. ಸರಿ ಯಾರುಯಾರನ್ನೋ ಹಿಡಿದು ಭದ್ರತಾ ಸಿಬ್ಬಂದಿಯ ಮನೆಯ ವಿಳಾಸ ಹಿಡಿದು ಅವರ ಮನೆಗೇ ಹೋದೆ.ಅಷ್ಟೇ, ನಮ್ಮ ಕ್ಯಾಮೆರಾ ಗೋವಿಂದ ಎಂದುಕೊಂಡೇ ಅವರ ಮನೆಯ ಬಾಗಿಲು ಬಡಿದೆ. ಬಾಗಿಲು ತೆಗೆದ ಆತ ನನ್ನ ಕಥೆಯನ್ನೆಲ್ಲಾ ಕೇಳಿ, ಒಳ ನಡೆದು ಕ್ಯಾಮೆರಾ ತಂದು ಇದೇ ತಾನೇ ನಿಮ್ಮ ಕ್ಯಾಮೆರಾ ಎಂದರು, ನನಗೆ ನಂಬಲಾಗಲಿಲ್ಲ, ಬೆಲೆ ಬಾಳುವ ವಸ್ತು ಅಲ್ಲಿ ಬಿಟ್ಟು ಬರುವುದು ಬೇಡ ಎಂದು ಮನೆಗೇ ತಂದೆ ಎಂದು ಕೈಗಿರಿಸಿದಾಗ, ಮಾತನಾಡಲು ಬಾಯಿ ಬರದೆ ಮನಸಾರೆ ವಂದಿಸಿ ಕೃತಜ್ಞತೆ ಸಲ್ಲಿಸಿದೆ.

ಮುಂದಿನ ಪುಟ ನೋಡಿ ...

ತಲುಪಿದ ಗುರಿ: ಜನವರಿ ೧೨, ೧೯೮೯, ನಮ್ಮ ಬಾಳಿನ ಅತ್ಯುತ್ಸಾಹದ ದಿನಗಳಲ್ಲೊಂದು, ನಿಜವೇ ಎಂದು ಕೇಳುವಂತಹ, ಜೀವನದೆ ಎಂದೂ ಮರೆಯಲಾರದಂತಹ ಒಂದು ಸಾಧನೆಗೈದ ದಿನ. ಸಂಜೆಯ ಹಿತವಾದ ಬಿಸಿಲಿನಲ್ಲಿ,ರಾಷ್ಟ್ರದ ರಾಜಧಾನಿ ದೆಹಲಿಯ ಪ್ರವೇಶ ಮಾಡಿದೆವು. ಬೋರೇಗೌಡ ಬೆಂಗಳೂರಿಗೆ ಬಂದ ಎಂಬಂತೆ ದೆಹಲಿಯನ್ನು ಪ್ರವೇಶ ಮಾಡಿದಾಗ ನಾನು ಬೋರೇಗೌಡನಾಗಿದ್ದೆ. ಭರ್ಜರಿ ಕಟ್ಟಡಗಳು, ವಿಶಾಲವಾದ ರಸ್ತೆಗಳು, ಬೆಂಗಳೂರನ್ನು ಕುಬ್ಜವಾಗಿಸಿತ್ತು (ಇದು ಇಪ್ಪತ್ತೈದು ವರ್ಷಗಳ ಹಿಂದೆ). ನಮ್ಮಣ್ಣ ಅವರ ದೆಹಲಿಯ ಕಛೇರಿಯನ್ನು ಮೊದಲು ಹುಡುಕಿ ನಮಗೆ ಅಲ್ಲಿ ತಂಗಲು ಅವರ ಅತಿಥಿಗೃಹದ ವಿವರವನ್ನು ತಂದ.

ಅವರ ಕಛೇರಿಗೆ ಒಂದು ಪತ್ರ ಬಂದಿತ್ತಂತೆ. ಅದರಲ್ಲಿ ಸ್ವೀಕರಿಸಬೇಕಾದ ವ್ಯಕ್ತಿಯ ಹೆಸರೇ ಇಲ್ಲ, ವಿಳಾಸ ಮಾತ್ರ ಕಛೇರಿಯದು. ಹಿಂದೆ ಬರೆದವರ ಹೆಸರೇನೋ ಇದೆ. ಯಾರಿಗೆ ಆ ಪತ್ರ ಬಂದಿದೆಯೆಂದು ಯಾರಿಗೂ ತಿಳಿಯದು. ಒಡೆದು ನೋಡಿದರೆ ಒಳಗಿನ ಭಾಷೆಯೂ ತಿಳಿಯದು. ಒಬ್ಬರು ತಮಿಳೆಂದರೆ, ಒಬ್ಬರು ಮಲಯಾಳಮ್, ಮತ್ತೊಬ್ಬರು ತೆಲುಗು ಎಂದು ಊಹೆಗಳು. ಸರಿ ನಮ್ಮಣ್ಣ ಹೋದಾಗ, ಇವರು ದಕ್ಷಿಣದವರು, ಇವರಿಗೆ ಯಾವ ಭಾಷೆಯೆಂದು ತಿಳಿಯಬಹುದೆಂದು, ಯಾರೋ ಇವನಿಗೆ ಪತ್ರ ತೋರಿಸಿದರಂತೆ, ನಮ್ಮಣ್ಣ ಅರೆ ಇದು ಕನ್ನಡ ಎಂದು ಓದಿದರೆ, ಅದು ನಮ್ಮ ತಂಗಿ ನಮಗೆ ಬೆಂಗಳೂರಿನಿಂದ ಬರೆದಿದ್ದ ಪತ್ರ. ವಿಳಾಸದಲ್ಲಿ ನಮ್ಮ ಹೆಸರನ್ನು ಬರೆಯಲು ಮರೆತೇ ಹೋಗಿದ್ದಳು. ಆ ಪತ್ರ ನಮಗೆ ದೆಹಲಿ ತಲುಪಿದ್ದಕ್ಕೆ ದೊರೆತ ಬೋನಸ್ ನಂತಿತ್ತು...



ಇದರ ಯಜಮಾನ ನಾನೇ ...



ಮರೆಯಲಾರದ ಹಾದಿಯಲ್ಲಿ ನಾನು ...

ರಣಹದ್ದುಗಳ ಮೇಳ ...

ಮುಂದಿನ ಸಂಚಿಕೆಯಲ್ಲಿ; ಎಂ. ಡಿ. ಅವರು ಕರೀತಾ ಇದ್ದಾರೆ ಬನ್ನಿ ಎಂದಾಗ, ಬೆಂಗಳೂರಿನಲ್ಲಿ ಎಂದೂ ಮಾತನಾಡಿಸದ ಕಂಪನಿಯ ಮಾಲೀಕರು, ದೆಹಲಿಗೆ ನಾನು ಬಂದ ಸಮಯದಲ್ಲೇ ಬರಬೇಕೆ ...

ನಿಮ್ಮ ಜೀವನದ ಅನುಭವ ನಮ್ಮ ಓದುಗರೊಂದಿಗೆ ಹಂಚಿಕೊಳ್ಳಲು ಬಯಸುವಿರಾದರೆ

horanadachilume@gmail.com ಗೆ ನಿಮ್ಮ ಲೇಖನ ಕಳುಹಿಸಿ

ಛಾಯಾ ಚಿಲುಮೆ – ಕ್ಲಿಕ್ ಕ್ಲಿಕ್ ಕ್ಲಿಕ್

ನೀವು ತೆಗೆದ ಚಿತ್ರ ಇಲ್ಲಿ ಕಾಣಬೇಕೇ

ಇ-ಮೇಲ್ ಮಾಡಿ: horanadachilume@gmail.com



ಬ್ಲೂ ಮೌಂಟೆನ್ ಚಾರಣ - ಕ್ಲಿಕ್: ಕನಕಾಪುರ ನಾರಾಯಣ

ಒಬೆರಾನ್ ಆಪೆಕಟ್ಟು, ಆಸ್ಟ್ರೇಲಿಯಾ

ಬನ್ನಿ ... ಪ್ರಕೃತಿಯನ್ನು ಪ್ರೀತಿಸೋಣ

ಟಾಸ್ಮೇನಿಯ ಪ್ರವಾಸ - ಕ್ಲಿಕ್: ನಾಗಶೈಲ ಕುಮಾರ್

ಜಾಣ ಕರ್ನಾಟಕ – ಉತ್ತರ

೧. ಉತ್ತರ: ೧. ಬ್ರಹ್ಮಗಿರಿ ೨. ಸ್ಕಂದಗಿರಿ ೩.ಚಂದ್ರಗಿರಿ ೪.ದಿಬ್ಬಗಿರಿ (ಹೇಮಗಿರಿ)

೨ ಸಾವನ ದುರ್ಗ

ವಿಜ್ಞಾನ

ಕೋಣೆಯಲ್ಲಿ ಕಾಮನಬಿಲ್ಲು

ಸಂಕಲನ: ಬದರಿ ತ್ಯಾಮಗೊಂಡ್ಲು

ವ್ಯಾಲೆಂಟೈನ್ ದಿನಕ್ಕೊಂದು ಕೋಣೆಯಲ್ಲೊಂದು ಕಾಮನ ಬಿಲ್ಲನ್ನು ಮಾಡೋಣವೇ!



ಬೇಕಾಗುವ ಸಾಮಾನು:

ಅಗಲವಾದ ಮತ್ತು ಸಮತಟ್ಟಾಗಿರುವ ನೀರು ತುಂಬಿರುವ ಬೌಲ್, ಸಣ್ಣ ಕನ್ನಡಿ, ಟಾರ್ಚ್

ವಿಧಾನ

ಕನ್ನಡಿಯನ್ನು ಬೌಲ್ ನಲ್ಲಿ ಸುಮಾರು 30° ಕೋನದಲ್ಲಿ ಚಿತ್ರದಲ್ಲಿ ತೋರಿಸಿರುವಂತೆ ಇರಿಸಿ.

ರೂಮನ್ನು ಕತ್ತಲೆ ಮಾಡಿ, ಟಾರ್ಚ್ ಬೆಳಕನ್ನು ಕನ್ನಡಿಯ ಮೇಲೆ ಬೀಳುವಂತೆ ಮಾಡಿ.

ರೂಮಿನ ಸೀಲಿಂಗ್ ಮೇಲೆ "ಕಾಮನ ಬಿಲ್ಲು" ಪ್ರತ್ಯಕ್ಷ.

ರಹಸ್ಯ

ಬೌಲ್ ನಲ್ಲಿ ಇರುವ ನೀರು ತ್ರಿಭುಜ (PRISM) ವಾಗಿ ವರ್ತಿಸಿ ಬೆಳಕಿನಲ್ಲಿರುವ ಏಳು ಬಣ್ಣಗಳನ್ನು ಆಯಾ ಬಣ್ಣದ ತರಂಗಾಂತರದ (Wavelength) ಅನುಗುಣವಾಗಿ ವಕ್ರೀಭವನವಾಗಿಸುತ್ತದೆ (Refraction). ಹೀಗಾಗಿ ಏಳು ಬಣ್ಣಗಳ ಕಾಮನಬಿಲ್ಲು ಗೋಚರಿಸುತ್ತದೆ. ಪ್ರೇಮಿಗಳ ದಿನಕ್ಕೆ ಈ ವಿಜ್ಞಾನದ ಅರಿವು ರೋಮಾಂಚನ ತರಿಸುತ್ತದೆ ಅಲ್ಲವೇ.▪

ಅಲ್ಲಲ್ಲಿ ಏನೇನು

ನಿಮ್ಮ ಕಾರ್ಯಕ್ರಮವಿದ್ದರೆ ತಿಳಿಸಿ - horanadachilume@gmail.com

Bharatiya Vidya Bhavan Australia

Holi mahotsav

Darling Harbour Sydney
21st to 23rd March 2014

www.holimahotsav.com.au
Contact 1300BHAVAN (1300 242 826)

Madhvanavami (ಮಧ್ವನವಮಿ)

Venue : SRI MANDIR

Address : No 286 Cumberland Road AUBURN
(Corner of Albert & Cumberland Roads)

Time: 10 A.M. to 1.30 P.M.

Date: 16/ 02/ 2014

Shiva Mahotsavam 2014

Sri Venkateshwara Temple,
Temple Road, Helensburgh
NSW-2508 Australia

From 19th to 28th Feb 2014
Concluding on MahaShivarathri / Chariot Day

More details at www.svtsydney.org

ನಮ್ಮ
ಸುತ್ತಾ
ಮುತ್ತಾ

3rd Australian National Hindu Conference

Sat & Sun 26-27 April 2014
8:30 AM - 5:30 PM

Workshops, networking and discussions.
Organised by Vishva Hindu Parishad of Australia Inc.

Both Day Registration Fee: $50
Details: www.vhp.org.au or email:
conference@vhp.org.au

ಈ ಸಂಚಿಕೆ ನಿಮಗಾಗಿ ತಂದವರು – ಸುಗಮ ಕನ್ನಡ ಕೂಟ – ಸಿಡ್ನಿ, ಆಸ್ಟ್ರೇಲಿಯಾ

ವಿನ್ಯಾಸ ಮತ್ತು ಮುಖ್ಯ ಸಂಪಾದಕರು – ಬದರಿ ತ್ಯಾಮಗೊಂಡ್ಲು ~ ಸಂಕಲನ – ವೀಣಾ ಸುದರ್ಶನ್, ರಾಜಲಕ್ಷ್ಮಿ ನಾರಾಯಣ

ಸಲಹಾ ಸಮಿತಿ –ಕನಕಾಪುರ ನಾರಾಯಣ, ನಾಗೇಂದ್ರ ಅನಂತಮೂರ್ತಿ

ಸೂಚನೆ: ಈ ಸಂಚಿಕೆಯಲ್ಲಿ ಪ್ರಕಟವಾಗಿರುವ ಎಲ್ಲ ವಿಷಯಗಳು ವಿವಿಧ ಲೇಖಕರ ಅನಿಸಿಕೆಗಳು. ಯಾವುದೇ ಅನಾನುಕೂಲವಾದಲ್ಲಿ "ಸುಗಮ ಕನ್ನಡ ಕೂಟ" ಅಥವಾ ಅದಕ್ಕೆ ಸಂಬಂಧಿಸಿದ ವ್ಯಕ್ತಿಗಳು ಜವಾಬ್ದಾರರಲ್ಲ. ಈ ಸಂಚಿಕೆಯಲ್ಲಿ ಪ್ರಕಟವಾದ ಎಲ್ಲ ಸುದ್ದಿ ಮಾಹಿತಿ, ಚಿತ್ರಗಳ ಹಕ್ಕುಗಳು ಸ್ಪಷ್ಟವಾಗಿ ಉಲ್ಲೇಖಿಸಿರದಿದ್ದರೆ ಅದು ಸುಗಮ ಕನ್ನಡ ಕೂಟಕ್ಕೆ ಸೇರಿದೆ.
ಸಂಚಿಕೆಯಲ್ಲಿ ಬಳಸಿದ ಹಲವು ಚಿತ್ರಗಳು ಅಂತರ್ಜಾಲದಿಂದ ಪಡೆದದ್ದು. ಅದರ ಎಲ್ಲ ಹಕ್ಕೂ ಅದರದರ ಕರ್ತೃಗಳಿಗೆ ಸೇರಿದ್ದು.